# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 199 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 09.02.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 199 • PRGI No:KARKAN/2023/88055 • VIJAYANAGARA • 09.02.2025 • Sunday • Page:04 • Rs:2




ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+ Digital E-PAPER READERS



No.1 HAMPI TIMES LEADING VIJAYANAGARA District News Paper

Contact for Advertisements: 9448633038





## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಮನೆ ಬಾಡಿಗೆಗೆ ಇದೆ

ಹೊಸಪೇಟೆಯ ವಿವೇಕಾನಂದನಗರದಲ್ಲಿ ಶ್ರೀನಿವಾಸ ಅಪಾರ್ಟ್‌ಮೆಂಟ್ ಎದುರುಗಡೆ, ಸಮರ್ಪಕ (ಸಿಹಿ & ಬೋರ್‌ವೆಲ್) ನೀರಿನ ಸೌಲಭ್ಯ ಇರುವ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ನೇರವಾಗಿ ಸಂಪರ್ಕಿಸಿ

M: 9909978170
M: 9448867485

For Ads: 94486 33038


# ಪಾರ್ಕ್‌ಗಳು ನೆಮ್ಮದಿ ತಾಣಗಳಾಗಲಿವೆ

## ನಾಲ್ಕು ಕೋಟಿ ರೂ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯ | ಸಂಸದ ಈ ತುಕಾರಾಮ್ ಹೇಳಿಕೆ




■ ಹಂಪಿ ಟೈಮ್ಸ್ ಹೊಸಪೇಟೆ

ಸಂಸದರ ಮೊದಲನೇ ಅನುದಾನದಲ್ಲಿ ಸ್ಥಳೀಯ ನಾಗರಿಕರಿಗೆ ನೆಮ್ಮದಿಯುತ ವಾತವಾರಣ ಕಲ್ಪಿಸಲು, ನಗರ ಸೌಂದರೀಕರಣಕ್ಕೆ ಆದ್ಯತೆ ನೀಡಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಸಂಸದ ಈ.ತುಕಾರಾಮ್ ಹೇಳಿದರು.

ನಗರದ ವಿವಿಧ ವಾರ್ಡ್‌ಗಳಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ಪಾರ್ಕ್‌ಗಳ ಅಭಿವೃದ್ಧಿ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಶನಿವಾರ ಮಾತನಾಡಿದರು, ಕೇಂದ್ರ ಸರ್ಕಾರದಿಂದ ನೀಡಿರುವ ಅನುದಾನದಲ್ಲಿ ಹೆಚ್ಚಿನ ಆದ್ಯತೆ ನಗರದ ವಿವಿಧ ಲೇಔಟ್‌ಗಳಲ್ಲಿನ ಪಾರ್ಕ್‌ಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳ ಲಾಗಿದೆ. ಮಕ್ಕಳು, ಮಹಿಳೆಯರು, ವಯೋವೃದ್ಧರು, ನಿವೃತ್ತ ನೌಕರರು ಸೇರಿದಂತೆ ಒತ್ತಡದ ಬದುಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ನೆಮ್ಮದಿಯುತವಾಗಿ ಸಮಯ ಕಳೆಯಲು ಪಾರ್ಕ್‌ಗಳು ತುಂಬಾ ಸಹಕಾರಿಯಾಗಲಿವೆ. ಪಾರ್ಕ್‌ಗಳಲ್ಲಿ ಮಕ್ಕಳಿಗೆ ಆಟಿಕೆ ವಸ್ತುಗಳು, ಆಸನಗಳು, ವಿದ್ಯುತ್ ದೀಪಗಳು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಪಿರಮಿಡ್ ಮಾದರಿಯಲ್ಲಿ ಪರಗೋಲು ಸಹಿತ ಹಸಿರು ಉದ್ಯಾನವನ ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಹೊಸಪೇಟೆ ನಗರ ವ್ಯಾಪ್ತಿಯಲ್ಲಿ ಜೆ.ಪಿ.ನಗರದಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ಪಾರ್ಕ್ ಅಭಿವೃದ್ಧಿ ಕಾಮಗಾರಿ, ವಿದ್ಯಾನಗರದಲ್ಲಿ 52 ಲಕ್ಷ ರೂ.ವೆಚ್ಚದಲ್ಲಿ ಪಾರ್ಕ್ ಅಭಿವೃದ್ಧಿ ಕಾಮಗಾರಿ, ಬಸವೇಶ್ವರ ಬಡಾವಣೆಯಲ್ಲಿ 65 ಲಕ್ಷ ರೂ.ವೆಚ್ಚದ ಪಾರ್ಕ್ ಅಭಿವೃದ್ಧಿ ಕಾಮಗಾರಿ, ರಾಜಾಜಿ ನಗರದಲ್ಲಿ 50 ಲಕ್ಷ ರೂ.ವೆಚ್ಚದ ಪಾರ್ಕ್ ಅಭಿವೃದ್ಧಿ ಕಾಮಗಾರಿ, ಎಂ.ಪಿ.ಪ್ರಕಾಶ ನಗರದ ಶಂಕರಗೌಡ ಕಾಲೋನಿಯಲ್ಲಿ 65 ಲಕ್ಷ ರೂ.ವೆಚ್ಚದ ಪಾರ್ಕ್ ಅಭಿವೃದ್ಧಿ ಕಾಮಗಾರಿ ಹಾಗೂ ಮೂರಂಗಡಿ ವೃತ್ತದಿಂದ ಹಂಪಿ ರಸ್ತೆಯ ಮೂಲಕ ಎಂ.ಪಿ.ಪ್ರಕಾಶ್ ನಗರ ಕ್ರಾಸ್‌ವರೆಗೆ ಮತ್ತು ಮಲ್ಲಿಗೆ ಹೋಟೇಲ್ ಮುಂಭಾಗದಿಂದ ಪತ್ತಿಕೊಂಡ ಎನ್‌ಕ್ಲೇವ್‌ವರೆಗೆ ಪಾದಚಾರಿ ಮಾರ್ಗ ಅಭಿವೃದ್ಧಿ >>4

## ಆನಂದ ಬಾಣ




# ಫಾರಂ 3 ವಿತರಣಾ ಮೇಳ

## ಮಧ್ಯವರ್ತಿಗಳನ್ನ ಕೈಬಿಡಿ : ಡಿಸಿ ಎಂ.ಎಸ್.ದಿವಾಕರ್

■ ಹಂಪಿ ಟೈಮ್ಸ್ ಹೊಸಪೇಟೆ



ಜಿಲ್ಲೆಯ ಎಲ್ಲಾ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಆಸ್ತಿ ದಾಖಲೆಯ ಫಾರಂ-3 ಮೇಳವನ್ನು ಆಯೋಜಿಸಲಾಗಿದ್ದು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. >>4

# ಟಿಎಚ್‌ಒ ಕಚೇರಿ ಪಕ್ಕ ಬೆಂಕಿ ತಪ್ಪಿದ ಅನಾಹುತ

## ಸಂದಿಯೊಳಗೆ ಕಸದ ರಾಶಿ | ಆರೋಗ್ಯ ಇಲಾಖೆಯ ಆವರಣದಲ್ಲಿಲ್ಲ ಶುಚಿತ್ವ

■ ಹಂಪಿ ಟೈಮ್ಸ್ ಹೊಸಪೇಟೆ



ನಗರದ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯದ ಮೇಲೆ ವೆಲ್ಡಿಂಗ್ ಕಾರ್ಯ ನಡೆಯುವಾಗ ಕಿಡಿಯೊಂದು ಸಿಡಿದ ಪರಿಣಾಮ ಕಟ್ಟಡ ಹಿಂಭಾಗದಲ್ಲಿ ಸುರಿಯಲಾಗಿದ್ದ ಕಸಕ್ಕೆ ಬೆಂಕಿ ತಗುಲಿದೆ. ಉಂಡು ಬೀಸಾಡಿದ್ದ ಪೇಪರ್ ಪ್ಲೇಟ್, ಕಪ್‌ಗಳು, ಮುರಿದು ಬಿದ್ದಿದ ಗಿಡದ ರಂಬೆ ಕೊಂಬೆಗಳು, ಉದುರಿದ ಎಲೆಗಳಿದ್ದರಿಂದ ಬೆಂಕಿಯ ಜ್ವಾಲೆ ಹರಡಿಕೊಂಡಿದೆ. ಕೂಡಲೇ ಅಲ್ಲಿದ್ದವರು ಬೆಂಕಿಗೆ ನೀರು ಸುರಿದು ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ಆಸ್ಪತ್ರೆಯ ಕಟ್ಟಡದ ಹೊರಭಾಗದ ಕೆಲ ವೈರಿಂಗ್ ಸುಟ್ಟಿದ್ದು, ಕಛೇರಿಯ ಕಿಟಕಿಯ ಗ್ಲಾಸ್‌ಗಳು ಪುಡಿಯಾಗಿವೆ. ಹೊಗೆಯೂ ಒಳನುಗ್ಗಿದ್ದರಿಂದ ಅಲ್ಲಲ್ಲಿ ಕಪ್ಪಾಗಿದೆ. ಜನರಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಆರೋಗ್ಯಾಧಿಕಾರಿಗಳ ಕಚೇರಿ ಸುತ್ತಮುತ್ತಲೇ ಕಸದ ರಾಶಿ ತೆರವು ಗೊಳಿಸುವಲ್ಲಿ ಆಸ್ಪತ್ರೆಯ ಅಧಿಕಾರಿಗಳ ನಿರ್ಲಕ್ಷ್ಯವೇ ತೋರಿದ್ದಾರೆ ಎನ್ನುವುದಕ್ಕೆ ಈ ಘಟನೆ ಸಾಕ್ಷೀಕರಿಸುತ್ತದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಕಚೇರಿಗಳ ಸುತ್ತ ಸ್ವಚ್ಛತೆ ಮಾಯವಾಗಿವೆ. ಸರ್ಕಾರಿ ದಾಖಲೆಗಳಿರುವ ಜಾಗದಲ್ಲಿ ಇಂತಹ ದುರ್ಘಟನೆಗಳ ಮರುಕಳಿಸದಂತೆ ಸಂಬಂಧಿಸಿದವರು ಎಚ್ಚೆತ್ತುಕೊಂಡು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಟಿಎಚ್‌ಒ ಡಾ.ಬಸವರಾಜ ಪತ್ರಿಕೆಗೆ ಪ್ರತಿಕ್ರಿಯಿಸಿ, ಬೆಂಕಿ ನಂದಿಸಲಾಗಿದೆ ಅಲ್ಲಿ ಏನೂ ನಷ್ಟವಾಗಿಲ್ಲ ಎಂದು ತಿಳಿಸಿದ್ದಾರೆ.

# ಕರ್ನಾಟಕದ ಗ್ಯಾರಂಟಿ ಪ್ರಗತಿಗೆ ವಿಶ್ವಸಂಸ್ಥೆ ಅಧ್ಯಕ್ಷ ಫಿಲೆಮನ್ ಯಾಂಗ್ ಶ್ಲಾಘನೆ



■ ಹಂಪಿ ಟೈಮ್ಸ್ ಬಳ್ಳಾರಿ

ಮಹಿಳೆಯರನ್ನು ಪ್ರಮುಖ ಫಲಾನುಭವಿಗಳನ್ನಾಗಿ ಕೇಂದ್ರೀಕರಿಸಿ ರಾಜ್ಯದಲ್ಲಿ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ಕರ್ನಾಟಕ ಸಾಧಿಸಿರುವ ಲಿಂಗ ಸಮಾನತೆಯ ಉಪಕ್ರಮಗಳಿಗೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಅಧ್ಯಕ್ಷ ಕ್ಯಾಮರೂನ್‌ನ ಫಿಲೆಮನ್ ಯಾಂಗ್ ಮೆಚ್ಚುಗೆ ಸೂಚಿಸಿದ್ದಾರೆ.

ಅವರು ಶುಕ್ರವಾರ ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಗರದ ಖಾಸಗಿ ಹೋಟೆಲ್ ತಾಜ್ ವೆಸ್ಟೆಂಡ್‌ನಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಸ್ವಸಹಾಯ ಗುಂಪಿನ ಮಹಿಳೆಯರು ರೇಷ್ಮೆ ಗೂಡುಗಳಿಂದ ತಯಾರಿಸಿದ ಪುಷ್ಪಗುಚ್ಛದೊಂದಿಗೆ ಸ್ವಾಗತಿಸಿದರು.

ಒಂದು ಜಗತ್ತು ಹಲವು ಸಾಧ್ಯತೆಗಳನ್ನು ಬಿಂಬಿಸುವ ಕರ್ನಾಟಕ ಕುರಿತಾದ ಪುಸ್ತಕವನ್ನು ನೀಡಿದರು. ಸುಸ್ಥಿರ ಅಭಿವೃದ್ಧಿ ಗುರಿಗಳ (SDG) ಸಾಧನೆಯಲ್ಲಿ ಕರ್ನಾಟಕವು ಉನ್ನತ ಸ್ಥಾನ ಪಡೆಯಲು ಸಾಧ್ಯವಾಗಿರುವ ಬಗ್ಗೆ ವಿಶ್ವಸಂಸ್ಥೆಯ ಅಧ್ಯಕ್ಷರು ಆಸಕ್ತಿಯಿಂದ ಹೆಚ್ಚು ಮಾಹಿತಿ ಹಾಗೂ ವಿವರಗಳನ್ನು ಬಯಸಿದರು.

ಗ್ಯಾರಂಟಿ ಯೋಜನೆಗಳಲ್ಲಿ ಮಹಿಳೆಯರ ಕೈಗೆ ನಗದು ಹಣ ನೀಡುವ ಗೃಹಲಕ್ಷ್ಮಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶ ನೀಡುವ ಶಕ್ತಿ, ಕಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರವನ್ನು ಸುಧಾರಿಸಲು ಕೈಗೊಂಡಿರುವ ಕ್ರಮಗಳು, ಹಸಿವು ಮತ್ತು ಅಪೌಷ್ಟಿಕತೆಯನ್ನು ತಡೆಗಟ್ಟಲು ತಲಾವಾರು ಪೋಷಕಾಂಶ ನೀಡಿಕೆ, ಕೌಶಲ್ಯದ ಮೂಲಕ ಉದ್ಯೋಗ ಗಳಿಕೆ, ಅಡುಗೆ ಅನಿಲ ಪೂರೈಕೆ, ಉಚಿತ ವಿದ್ಯುತ್ ಪೂರೈಕೆ ಕುರಿತ >>4




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances. Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಆಕರ್ಷಕ ವ್ಯಕ್ತಿತ್ವದ ಹತ್ತಾರು ಮುಖಗಳು!

**ವ್ಯಕ್ತಿತ್ವವನ್ನು ರೂಡಿಸಿಕೊಳ್ಳಲು ಕೆಲವು ಸಣ್ಣ ಸಣ್ಣ ಪ್ರಯತ್ನಗಳನ್ನು ಮೊದಮೊದಲು ಒತ್ತಾಯ ಪೂರ್ವಕವಾಗಿ ನಂತರ ಅಬ್ಯಾಸದ ಫಲವಾಗಿ ಮುಂದುವರಿದಂತೆ ನೋಡಿಕೊಳ್ಳ ಬೇಕು, ನಂತರ ಅವುಗಳು ಸಹಜವಾಗಿ ನಮ್ಮ ಜೀವನ ಶೈಲಿಯಾಗಿ, ನಮ್ಮ ಸಂಸ್ಕೃತಿಯಾಗಿ ನಮ್ಮ ಪರಂಪರೆಯಂತೆ ಯುಗಯುಗಗಳಲ್ಲಿ ಪ್ರವಹಿಸುತ್ತವೆ ಅವುಗಳೆ ಸದ್ಯದ ಅವಶ್ಯಕ– ಆಕರ್ಷಕ ವ್ಯಕ್ತಿತ್ವದ ಹತ್ತಾರು ಮುಖಗಳು..!**



ಪ್ರತಿಯೊಬ್ಬರ ಜೀವನದಲ್ಲೂ ಕೆಲವೊಮ್ಮೆಯಾದರೂ ಹೀಗೆ ಅನ್ನಿಸಲೇ ಬೇಕು, ಹೌದಲ್ಲ ಅದೆಂತ ಮಾಂತ್ರಿಕ ಶಕ್ತಿ ಆತನದು, ವಾವ್ಹ್ ಇದಪ್ಪ ವರಸೆ ಅಂದರೆ ಇವರಂತೆ ಮಾತನಾಡಲು ಸಾಧ್ಯವೇ ಇಲ್ಲ ಬಿಡಿ. ಏನು ಗುರೂ ಅದೆಂತಹ ಪ್ರಖರ ಬುದ್ದಿಶಕ್ತಿ ಅವರದು, ಅವರ ಮಾತೆ ಹಾಗೆ ಕೇಳುತ್ತಿದ್ದರೆ ಕೇಳುತ್ತಲೇ ಇರಬೇಕು ಎನ್ನಿಸುತ್ತದೆ. ಹೀಗೆ ಕೆಲವೊಮ್ಮೆ ನೋಡಿದ ಕೂಡಲೆ ಕೆಲವರು ತಮ್ಮ ಸುತ್ತಲಿನ ಜನರನ್ನು ಸೂಜಿಗಲ್ಲಿನಂತೆ ತಮ್ಮತ್ತ ಆಕರ್ಷಿಸುವ ಗುಣವನ್ನು ಹೊಂದಿರುತ್ತಾರಲ್ಲ ಅಂತವರನ್ನು ನೋಡಿದಾಗ ನಮ್ಮಲ್ಲಿ ಒಂದು ರೀತಿಯ ಹುಳಿ ಹುಳಿ ಬಾವನೆ ಉಂಟಾಗುತ್ತದೆಯಲ್ಲವೆ..? ಅದೇ ಅದನ್ನೆ ನಾವು ಸಹ ಏಕೆ ರೂಡಿಸಿಕೊಳ್ಳಬಾರದು, ಆಕರ್ಷಕ ವ್ಯಕ್ತಿತ್ವ ಎಂದರೆ ಏನು? ಅದು ಜನ್ಮಜಾತವಾಗಿ ಬರುವಂತಹದ್ದೆ? ಅಥವಾ ಅರ್ಜಿತವೆ? ಎನ್ನುವುದನ್ನು ಒಮ್ಮೆ ಸರಿಯಾದ ಮಾರ್ಗದಲ್ಲಿ ನಿಷ್ಕರ್ಷಿಸಿದರೆ ಒಂದು ಹಂತಕ್ಕೆ ನಮ್ಮ ನಮ್ಮಗಳ ವ್ಯಕ್ತಿತ್ವಗಳನ್ನು ಆಕರ್ಷಣಿಯವಾಗಿ ರೂಪಿಸಿಕೊಳ್ಳಬಹುದು.

ಆಕರ್ಷಕ ವ್ಯಕ್ತಿತ್ವ ಎಂದರೆ, ಜನಸಾಮಾನ್ಯರಾದಿಯಾಗಿ ವ್ಯಕ್ತಿಯೊಬ್ಬ ನನ್ನು ನೋಡಿದ ತಕ್ಷಣ ಇನ್ನಿಲ್ಲದಂತೆ ಅವನಲ್ಲಿ ಒಂದು ರೀತಿಯ ಮೆಚ್ಚುಗೆಯ ಭಾವನೆ ಜಾಗ್ರುತವಾಗುವಂತಹದ್ದು, ಅವನ/ಳಲ್ಲಿ ಆಸಕ್ತಿಯನ್ನು, ಅಭಿರುಚಿಯನ್ನು ಹೊಂದುವಂತಹದ್ದು, ಅವನ/ಳ ಒಟ್ಟಿಗೆ ಇರುವಂತಹ, ಜವಾಬ್ದಾರಿಗಳನ್ನು ಹಂಚಿಕೊಳ್ಳುವಂತಹ, ಕಾರ್ಯೋನ್ಮುಕರಾಗುವಂತಹ, ಅಂತವರ ಸಂಘ ಸಹವಾಸದಲ್ಲಿ ಇರಬಯಸುವಂತಹ ಮನಸ್ಸಾಗುವುದಲ್ಲವೆ? ಅವನೊ/ಳೊಬ್ಬ ಗುರುವಾಗಿದ್ದರೆ ಅವರ ಜ್ಞಾನದ ಕುರಿತಾಗಿ, ಅವನೊ/ಳೊಬ್ಬ ಆಟಗಾರನಾ/ಳಾಗಿದ್ದರೆ ಅವರಂತೆ ಸಾಧನೆ ತೋರುವಲ್ಲಿ, ಅವರೊಬ್ಬ ವಿಜ್ಞಾನಿಯಾಗಿದ್ದರೆ ಅಂತಹದ್ದೆ ಸಂಶೋಧನೆಯನ್ನು ಕೈಗೊಳ್ಳುವಲ್ಲಿ, ಹೀಗೆ ಒಬ್ಬ ನಟನಾಗಿದ್ದರೆ, ನಾಯಕಿಯಾಗಿದ್ದರೆ, ಸ್ವಾತಂತ್ರ ಹೋರಾಟಗಾರರಾಗಿದ್ದರೆ, ಒಳ್ಳೆಯ ವೈದ್ದರಾಗಿದ್ದರೆ, ರಾಜಕೀಯ ಮುತ್ಸದ್ದಿಯಾಗಿದ್ದರೆ, ಪ್ರಸಿದ್ದ ಸಮಾಜ ಸುಧಾರಕರಾಗಿದ್ದರೂ ಸರಿಯೆ, ಅವರ ಒಂದು ಆಕರ್ಷಕ ನಗುವಾಗಿರಬಹುದು, ಅಥವಾ ಅವರ ಪ್ರಖರವಾದಂತಹ ಬುದ್ದಿಶಕ್ತಿಯೇ ಆಗಿರಬಹುದು, ಅವರ ಒಳ್ಳೆಯ ಮಾತುಗಾರಿಕೆ ಯಾಗಿರಬಹುದು ಅಥವಾ ಅವರ ಅನನ್ಯವಾದ ಮೌನವೇ ಆಗಿರಬಹುದು ಅದು ಇನ್ನಿಲ್ಲದಂತೆ ನಮ್ಮಲ್ಲಿ ಅವರ ಕುರಿತು ನಮಗರಿವೇ ಇಲ್ಲದಂತೆ ಒಂದು ಜಾಗ್ರತ ಭಾವನೆಯನ್ನು ಮೂಡಿಸುತ್ತದೆಯಲ್ಲವೆ..? ಅದುವೇ ಅವರ ಆಕರ್ಷಕ ವ್ಯಕ್ತಿತ್ವ ಎನ್ನಬಹುದು.

ನಿಜ ಹೇಳಬೇಕೆಂದರೆ ಜನರ ಆಕರ್ಷಣೆಗೆ ಅವರ ಆಸಕ್ತಿಗೆ ಈ ಮೇಲಿನ ಯಾವುದಾದರೊಂದು ಗುಣ ಕಾರಣವಾಗಬಹುದು, ಇಲ್ಲವೆ ಈ ಮೇಲಿನ ಎಲ್ಲಾ ಗುಣಗಳೂ ಕಾರಣವಾಗಬಹುದು. ಸರಿ ಹಾಗಾದರೆ ಜನರನ್ನು ಮೇಲಿನ ಎಲ್ಲಾ ಗುಣಗಳು ಇದ್ದ ಮಾತ್ರಕ್ಕೆ ಅವರನ್ನು ಎಲ್ಲಾ ಸಮಯದಲ್ಲಿಯೂ ಮೆಚ್ಚಿಸಲು ಸಾಧ್ಯವೆ..? ಏಕೆಂದರೆ ನಾನು ಹೇಳಿದ ಮೇಲಿನ ಎಲ್ಲಾ ಗುಣಗಳು ಸಹಜವಾಗಿ ಮನುಷ್ಯನ ಮೂಲಭೂತ ವರ್ತನೆಗಳಾಗಿರಬಹುದು ಇಲ್ಲವೇ ಅರ್ಜಿಸಿಕೊಂಡ ಅಥವಾ ಒತ್ತಾಯಪೂರಕವಾಗಿ ರೂಡಿಸಿಕೊಂಡ ಗುಣಗಳಾಗಿರಬಹುದಲ್ಲವೆ. ಹಾಗಾಗಿ ಎಲ್ಲಾ ಜನರನ್ನು ಎಲ್ಲಾ ಕಾಲದಲ್ಲೂ ಒಪ್ಪಿಸಲು ಸಾಧ್ಯವಿಲ್ಲ ಆದರೆ ಇಂತಹ ಅಂಶಗಳ ಕುರಿತಾಗಿ ಸರಿಯಾಗಿ ನಾವು ಅರ್ಥ ಮಾಡಿಕೊಂಡು ನಮ್ಮಲ್ಲಿ ಅಳವಡಿಸಿಕೊಂಡರೆ ಜನ ಮೆಚ್ಚುತ್ತಾರೆ ಇಲ್ಲವೂ ಗೊತ್ತಿಲ್ಲ ಆದರೆ ನಾವು ಅವರೊಂದಿಗೆ ಅವರು ನಮ್ಮೊಂದಿಗೆ ಒಂದು ಆರೋಗ್ಯಯುತ ಸಂಬಂದಕ್ಕೆ, ವ್ಯವಹಾರಕ್ಕೆ ತೆರೆದುಕೊಳ್ಳುವುದು ಮತ್ತು ಸ್ಪಂದಿಸುವು ದರಲ್ಲಿ ಸಂದೇಹವಿಲ್ಲ. ಆಕರ್ಷಕ ವ್ಯಕ್ತಿತ್ವ ಎನ್ನುವಂತಹದ್ದು ಕೇವಲ ಬಾಹ್ಯ ದೃಷ್ಟಿಕೋನದ ಮಾಪನವಾಗಿರದೆ ಅದು ವ್ಯಕ್ತಿಯೋರ್ವನ ಆಂತರಿಕ ಸತ್ವದ ಸಾಕಾರ ರೂಪವಾಗಿರುತ್ತದೆ. ಅಂತಹ ವ್ಯಕ್ತಿತ್ವವನ್ನು ರೂಡಿಸಿಕೊಳ್ಳಲು ಕೆಲವು ಸಣ್ಣ ಸಣ್ಣ ಪ್ರಯತ್ನಗಳನ್ನು ಮೊದಮೊದಲು ಒತ್ತಾಯ ಪೂರ್ವಕವಾಗಿ ನಂತರ ಅಬ್ಯಾಸದ ಫಲವಾಗಿ ಮುಂದುವರಿದಂತೆ ನೋಡಿಕೊಳ್ಳ ಬೇಕು, ನಂತರ ಅವುಗಳು ಸಹಜವಾಗಿ ನಮ್ಮ ಜೀವನ ಶೈಲಿಯಾಗಿ, ನಮ್ಮ ಸಂಸ್ಕೃತಿಯಾಗಿ ನಮ್ಮ ಪರಂಪರೆಯಂತೆ ಯುಗಯುಗಗಳಲ್ಲಿ ಪ್ರವಹಿಸುತ್ತವೆ ಅವುಗಳೆ ಸದ್ಯದ ಅವಶ್ಯಕ– ಆಕರ್ಷಕ ವ್ಯಕ್ತಿತ್ವದ ಹತ್ತಾರು ಮುಖಗಳು..!



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

**1. ಸಕಾರಾತ್ಮಕತೆ ಮತ್ತು ಸಾಮೂಹಿಕತೆಯ ಭಾವ ಬೆಳೆಸಿಕೊಳ್ಳಿ.**

ಸರ್ವರ ಬಗ್ಗೆ ಒಂದು ಸಕಾರಾತ್ಮಕ ಸಲುಗೆಯ ಭಾವನೆಯನ್ನು ಹೊಂದು ವುದು ಮತ್ತು ಸರ್ವರ ಹಿತಕ್ಕಾಗಿ ಸ್ಪಂದಿಸು ವುದು ಬಹುಮುಖ್ಯ ವಾಗುತ್ತದೆ. ನಿಮಗೆ ಪರಿಚಯವಿರಲಿ ಇಲ್ಲದೇ ಇರಲಿ ಯಾವುದೇ ವ್ಯಕ್ತಿ, ಒಂದು ಗುಂಪು, ಸಂಘ, ಒಂದು ಸಣ್ಣ ಕೂಟ ಹೀಗೆ ಏನೆ ಇರಲಿ ಅವರೊಂದಿಗೆ ಸಕಾರಾತ್ಮಕವಾಗಿ ಮಾತನಾಡಿ, ಅವರೊಂದಿಗೆ ಆತ್ಮೀಯವಾಗಿ ಬೆರೆಯಿರಿ, ಅವರೊಟ್ಟಿಗೆ ವಿಚಾರಗಳನ್ನು ಹಂಚಿಕೊಳ್ಳುವುದು, ಅವರ ಕುರಿತಾಗಿ ಒಂದೆರೆಡು ಮಾತಾಡಿ. ಅವರು ನಿಮ್ಮ ಬಗ್ಗೆ ಮಾತಾಡಲು ಅವಕಾಶ ಕೊಡಿ, ಹೀಗೆ ಅವರನ್ನು ಅರಿಯುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

**2. ನಿಮ್ಮ ಮೆಚ್ಚುಗೆ ಅಂತಹಕರಣದ ಅಡಿಪಾ ಯದ ಮೇಲೆ ಪ್ರಾಮಾಣಿಕ ವಾಗಿರಲಿ.**

ನಿಮ್ಮೆದುರುಗಿನ ವ್ಯಕ್ತಿಯ ಗುಣವಿಶೇಷತೆಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ ಮತ್ತು ಅಂತಹ ವಿಶೇಷ ಗುಣಗಳನ್ನು ಮುಕ್ತ ಕಂಠದಿಂದ ಹೊಗಳಿ ಏಕೆಂದರೆ ಯಾರು ಇನ್ನೊಬ್ಬರ ಗುಣಾವಗುಣ ಗಳನ್ನು ಒಪ್ಪಿಕೊಳ್ಳುವು ದಿಲ್ಲವೂ ಅಂತವರ ಮೆಚ್ಚುಗೆ ಕೇವಲ ಬಾಹ್ಯತೋರಿಕೆಯಾಗಿರುತ್ತದೆ. ಒಂದು ವೇಳೆ ಅಳವಡಿಸಿಕೊಳ್ಳಲು ಯೋಗ್ಯವಾದ ಅಂಶಗಳಿದ್ದರೆ ಖಂಡಿತವಾಗಿ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ.

**3. ಸಹಜತೆ ನಿಮ್ಮ ವರ್ತನೆಯ ಮೂಲಮಂತ್ರವಾಗಿರಲಿ.**

ಅತಿಯಾದ ಅಮೃತವೂ ವಿಷವಂತೆ..! ಹಾಗಾಗಿ ನಿಮ್ಮವರ ಕುರಿತ ನಿಮ್ಮ ಪ್ರತಿಕ್ರಿಯೆ ಸಹಜವಾಗಿರಲಿ ಮತ್ತು ಸೌಮ್ಯವಾಗಿ ವ್ಯವಹರಿಸಿ. ಹೇಳಬೇಕಾಗಿರುವುದನ್ನು ಅತ್ಯಂತ ಸೂಕ್ಷ್ಮವಾಗಿ ಅರ್ಥೈಸಿ ಹೇಳಿ, ಅಗತ್ಯವಾದಲ್ಲಿ ಮಾತ್ರ ನಿಮ್ಮ ಪ್ರತಿಕ್ರಿಯೆಯನ್ನು ನೀಡಿ. ನಿಮ್ಮ ಪ್ರತಿಕ್ರಿಯೆ ನಿಮ್ಮೆದುರುಗಿರುವವರ ಮನಸ್ಸನ್ನು ಅರಳಿಸುವಂತಿರಬೇಕು.

**4. ಪೂರ್ವಗ್ರಹ ಬೇಡವೇ ಬೇಡ.**

ಯಾವುದೇ ವಿಷಯ ವಸ್ತು ವ್ಯಕ್ತಿ ಮತ್ತು ವಿಚಾರವಾಗಿರಲಿ ಅದರ ಕುರಿತು ಪೂರ್ವಗ್ರಹ ಬೇಡವೇ ಬೇಡ. ಪರಿಚಿತರೊ ಅಪರಿಚಿತರೋ ನೀವು ಅವರಲ್ಲಿ ನಿಜವಾದ ಆಸಕ್ತಿಯನ್ನು, ಅವರಲ್ಲಿ ವಿಸ್ವಾಸವನ್ನು ತೋರಿದರೆ ಅವರೂ ಸಹ ನಿಮ್ಮಲ್ಲಿ ಇದೇ ಬಾವವನ್ನು ತಾಳುತ್ತಾರೆ. ಇತರರನ್ನೂ ಆಲಿಸಬೇಕು, ಇತರರನ್ನೂ ಆಸ್ತೆಯಿಂದ ಕೇಳಬೇಕು, ಇತರರ ಮಾತಿಗೂ ಬೆಲೆಯನ್ನು ಕೊಡಬೇಕು, ಆಗ ಮಾತ್ರ ಅವರಿಗೂ ಸಂತೋಷವಾಗುತ್ತದೆ ಮತ್ತು ನಿಮ್ಮಲ್ಲಿ ಅದೇ ಆಸ್ತೆ ಬೆಳೆಯುತ್ತದೆ. ಇಂತಹ ಸಣ್ಣ ಪುಟ್ಟ ನಿಮ್ಮ ವರ್ತನೆಗಳು ನಿಮ್ಮಎದುರಿಗಿನವರನ್ನು ನಿಮ್ಮತ್ತ ಸೆಳೆಯುತ್ತದೆ.

**5. ನೆನಪಿರಲಿ ನೀವು ಕೇವಲ ವ್ಯವಹರಿಸುತ್ತಿಲ್ಲ, ಇತರರ ಭಾವನೆಗಳನ್ನೂ ಅರ್ಥ ಮಾಡಿಕೊಳ್ಳಿ.**

"ಲೊಕೋ ವಿಭಿನ್ನಃ" ಎನ್ನುವಂತೆ ಪ್ರತಿಯೊಬ್ಬರೂ ಬೇರೆ ಬೇರೆಯೇ, ಪ್ರತಿಯೊಬ್ಬರಿಗೂ ಅವರದೇ ಆದ ಸಮಸ್ಯಗಳು ಸವಾಲುಗಳು ಅವರದೆ ಆದ ಭಾವನೆಗಳನ್ನು, ಅವರದೇ ಆದ ಜೀವನಾನುಭವಗಳು ಇದ್ದೇ ಇರುತ್ತವೆ ಹಾಗಾಗಿ ಪ್ರತಿಯೊಬ್ಬರ ಭಾವನೆಗಳನ್ನೂ ಅರ್ಥ ಮಾಡಿಕೊಳ್ಳಿ ಮತ್ತು ಗೌರವಿಸಿ ಹಾಗೆಯೇ ಅಗತ್ಯವಿದ್ದಾಗ ಅವರಿಗೆ ನಿಮ್ಮ ಬೆಂಬಲವನ್ನು ಕಾತ್ರಿಪಡಿಸಿಕೊಳ್ಳಿ ನಾನಿದ್ದೇನೆ ಎನ್ನುವ ಜಾಗೃತಭಾವನೆಯನ್ನು ಅವರಲ್ಲಿ ಮೂಡಿಸಿ. ಆಗ ನಿಮ್ಮ ಕುರಿತ ಅವರ ಆಪ್ತತೆ ಇನ್ನುಷ್ಟು ಗಟ್ಟಿಯಾಗುತ್ತದೆ. ನಿಮ್ಮ ಕಾಳಜಿ ಕೇವಲ ವ್ಯವಹರವಲ್ಲ ಅದು ಅವರೊಂದಿಗಿನ ನಿಜವಾದ ಒಡನಾಟ ಎನ್ನುವುದು ಮನವರೆಕೆಯಾಗುತ್ತದೆ.

**6. ನಿಮ್ಮ ಬಗ್ಗೆ ನಿಮಗಿರುವ ವಿಶ್ವಾಸ ಇತರರಿಗೂ ವಿಶೇಷ ಎನಿಸುವಂತಿರಲಿ.**

ಪ್ರತಿಯೊಬ್ಬರಿಗೂ ಅವರವರ ಬಗ್ಗೆ ಅವರದೇ ರೀತಿಯಲ್ಲಿ ವಿಶ್ವಾಸ ಇರುವುದು ಉತ್ತಮ ಆದರೆ ಅದೇ ಅತಿಯಾಗಬಾರದು, ನಿಮ್ಮ ಬಗೆಗಿನ ವಿಶ್ವಾಸ ಇತರರಲ್ಲೂ ನಿಮ್ಮ ಕುರಿತು ವಿಶೇಷತೆಯ ಭಾವವನ್ನು ಮೂಡಿಸುವಂತಿರಬೇಕು. ಆಗ ನಿನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ಇತರರಿಗೆ ಣಿನು ಮನವರಿಕೆ ಮಾಡಿಕೊಡುವ ಅಗತ್ಯ ಬೀಳುವುದಿಲ್ಲ. ಹಾಗೆಯೇ ನಿನ್ನ ಬಗ್ಗೆ ನಿನಗಿರುವ ವಿಶ್ವಾಸ ಇತರರಲ್ಲೂ ಅವರದೇ ಆದ ಆತ್ಮ ವಿಶ್ವಾಸ ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ, ಪ್ರೇರಣೆಯಾಗುತ್ತದೆ ಆಗ ನೀವು ಇತರರ ಕಣ್ಣಲ್ಲಿ ಆಕರ್ಷಕ ವ್ಯಕ್ತಿತ್ವದ ರೂಪವಾಗಿ ಕಾಣುತ್ತೀರಿ.

**7. ಒಂದು ಆತ್ಮೀಯ ನೋಟ, ನಗೆ, ಅಪ್ಪುಗೆ ಮತ್ತು ಬೆನ್ನು ತಟ್ಟುವಿಕೆ ಅವಶ್ಯಕ.**

ಆತ್ಮೀಯತೆಯನ್ನು ವ್ಯಕ್ತಪಡಿಸಲು ಇದಕ್ಕಿಂತ ಮಿಗಿಲಾದ ಮಾರ್ಗವಿದ್ದರೆ ತಿಳಿಸಿಬಿಡಿ. ನಿಮ್ಮ ಸಮಯಕ್ಕೆ, ನಿಮ್ಮ ಸಮಸ್ಯೆಗೆ, ನೀವು ವಿಸ್ವಾಸವಿಟ್ಟ, ನಿಮ್ಮ ನಂಬಿಗೆಯ ನಿಮಗಾಸರೆಯಾದ ನಿಮ್ಮವರಿಗೊಂದು ಆತ್ಮೀಯ ನೋಟ, ನಗೆ, ಅಪ್ಪುಗೆ ಮತ್ತು ಬೆನ್ನು ತಟ್ಟುವಿಕೆ ಬೇಕಲ್ಲವೆ..? ಒಂದು ವೇಳೆ ನಿಮ್ಮವರಲ್ಲದ, ನಿಮ್ಮನ್ನು ಗುರುತಿಸದ ವ್ಯಕ್ತಿಗಳೂ ಸಹ ನಿಮ್ಮ ಜೀವನದಲ್ಲಿ ತಮಗರಿವಿಲ್ಲದಂತೆ ಏನೆಲ್ಲಾ ಸಹಾಯ ಸಹಕಾರ ಸಹಯೋಗವನ್ನು ನೀಡಿರುತ್ತಾರೆ, ಅಂತವರೆಲ್ಲರಿಗೂ ಸಾರ್ಥಕ ಕೃತಜ್ಞನೆತೆ ತಿಳಿಸಿಬಿಡಿ ಆಗ ನೋಡಿ ಅವರ ಕಣ್ಣಲ್ಲಿ ನಿಜವಾಗಿಯೋ ಆದರ್ಶಪ್ರಾಯವಾಗಿಬಿಡುತ್ತೀರಿ. ನಿಮಗೆ ಗೊತ್ತಿರಲಿ ಪ್ರಾಮಾಣಿಕವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ಅತ್ಯಂತ ಉತ್ಕೃಷ್ಟವಾದ ಮಾನವ ಸನ್ನಡತೆ.

**8. ಸಮಯ ಸನ್ನಿವೇಷ ಮತ್ತು ಮಾತಿನ ಮೇಲೆ ಹಿಡಿತವಿರಲಿ.**

ನಾವೇಕೆ ಈ ಮಾತುಗಳನ್ನು ಸದಾ ಗಮನಿಸಬೇಕು ಎಂದರೆ ಆಡಿದ ಮಾತು, ನುಡಿದ ಸನ್ನಿವೇಷ ಮತ್ತು ಕಳೆದು ಹೋದ ಸಮಯ ಮತ್ತೆಂದು ಹಿಂತಿರುಗುವುದಿಲ್ಲ. ಹಾಗಾಗಿ ಯಾರೊಂದಿಗೆ ಮಾತನಾಡುತ್ತಿದ್ದೇನೆ, ಯಾವ ಸಮಯದಲ್ಲಿ ಮತ್ತು ಏನನ್ನು ಮಾತನಾಡುತ್ತಿದ್ದೇನೆ ಎನ್ನುವುದು ಅತೀ ಮುಖ್ಯವಾಗುತ್ತದೆ. ನಿಮ್ಮ ಒಂದು ಮಾತು ಒಬ್ಬರ ಮನಸ್ಸನ್ನು ಅರಳಿಸಲೂಬಹುದು ಅದೇ ಮಾತು ಅವರನ್ನು ಕೆರಳಿಸಿ ಹಾಳುಮಾಡಲೂ ಬಹುದು. ಹಾಗೆಯೇ ನೀವು ಮಾಡಿದಂತಹ ವಾಗ್ದಾನದ ಮಹತ್ವ ನಿಮಗರಿವಿರಲೇಬೇಕು. ಸುಳ್ಳು ಹೇಳಬೇಡಿ, ಇತರರನ್ನೂ ನಿಂದಿಸಬೇಡಿ, ನಿಮ್ಮ ಸಾಮರ್ಥ್ಯ ಮೀರಿದ ವಾಗ್ದಾನ ಮಾಡಬೇಡಿ, ನಿವಾಡಿದ ಮಾತಿಗೆ ಬದ್ದವಾಗಿರಿ, ಆಗ ನೋಡಿ ನಿಮ್ಮ ವ್ಯಕ್ತಿತ್ವಕ್ಕೊಂದು ಹೊಳಪು ತಾನಾಗಿಯೇ ಬರುತ್ತದೆ.

**9. ನಿಮ್ಮ ಅನುಪಸ್ಥಿತಿ ಇತರರನ್ನೂ ಕಾಡುವಂತಿರಲಿ.**

ನಿಮ್ಮ ಸುತ್ತಮುತ್ತಲಿನ ವಲಯದಲ್ಲಿ ಅದು ಶಾಲೆಯಾಗಿರಲಿ, ಕಚೇರಿಯಾಗರಲಿ, ಕೈತೋಟವಾಗಿರಲಿ, ಅಥವಾ ಆಟದ ಮೈದಾನವೇ ಆಗಿರಲಿ ಅಲ್ಲಿ ನಿಮ್ಮ ಅನುಪಸ್ಥಿತಿ ಎಲ್ಲರನ್ನೂ ಕಾಡುವಂತಿರಬೇಕು. ಹಾಗಾಗಬೇಕು ಎಂದರೆ ಇತರರೊಂದಿಗಿನ ನಿಮ್ಮ ಒಡನಾಟ, ವ್ಯವಹಾರ, ಕೆಲಸ ಮತ್ತು ನಿಮ್ಮ ಪಾಲ್ಗೊಳ್ಳುವಿಕೆಯ ಮಹತ್ವವನ್ನು ನೀವು ಅರಿಯಬೇಕು. ಪ್ರತಿಯೊಂದು ಸನ್ನಿವೇಷದಲ್ಲೂ ನೀವು ಇತರರೊಂದಿಗೆ ನೆಡೆದುಕೊಳ್ಳುವ ರೀತಿ, ಅವರ ಮಾತಿಗೆ ಅವರ ಸಮಸ್ಯಗೆ ಅವರ ಅಭಿಪ್ರಾಯಕ್ಕೆ ಅವರ ಅನಿವಾರ್ಯಕ್ಕೆ, ಅವರ ಆಸರೆಗೆ ನೀವು ಎಷ್ಟು ಸಮಯ ನೀಡಿದ್ದೀರಿ ಎನ್ನುವುದು ಮುಖ್ಯ. ಹಾಗೆಯೆ ಇತರರೊಂದಿಗಿನ ಕೇವಲ ಹರಟೆಹೋದಿಯುವುದು ಎಂದಲ್ಲ, ನೀವುರುವಷ್ಟೂ ಸಮಯದಲ್ಲಿನ ಧನಾತ್ಮಕ ಪಾಲ್ಗೊಳ್ಳುವಿಕೆ ಅವದಿಯನ್ನು ವಿಸ್ತರಿಸಿಕೊಳ್ಳಿ. ಆಗ ನಿಮ್ಮ ಅನುಪಸ್ಥಿತಿ ಕಾಡದೇ ಇರದು.

**10. ದೇರ್ ಈಜ್ ಆಲ್ವೇಶ್ ಸ್ಪೇಸ್ ಫಾರ್ ಇಮ್ಪ್ರೂವೈಜೇಷನ್– ಎಂದೂ ಮರೆಯದಿರಿ.**

ಇಂತಹ ವಿಷಯಗಳನ್ನು ಬರೆಯುವಾಗ ಮತ್ತು ಇಂತಹದ್ದೆ ವಿಷಯಗಳನ್ನು ಓದುವಾಗ ಪ್ರಾಂಕಾಗಿ ಅನಿಸುವುದು ಎಂದರೆ ಹೌದು ಹೌದು ಇದೆಲ್ಲ ಸರಿ ಆದರೆ ಇದೆನ್ನೆಲ್ಲ ಮಾಡ್ಲಿಕ್ಕೆ ಹೋದರೆ ಜೀವನ ನೆಡೆಸುವುದು ಕಷ್ಟವಾಗುತ್ತದೆ ಅಲ್ವ..? ನಾವು ಒಂದು ಲೆಕ್ಕಕ್ಕೆ ಓಕೆ ಆದರೆ ಎನ್ನುವವರಿಗೆ ಹೇಳಬೇಕಾದ ಒಂದೆ ಮಾತು ಅದಕ್ಕಾಗಿ ನೀವಿನ್ನೂ ಇಂತಹದ್ದನ್ನೆ ಓದುತ್ತಿದ್ದೀರಿ ಎಂದು. ಖಂಡಿತವಾಗಿ ಸಾಧನೆಗೆ ಹಲವಾರು ದಾರಿ, ಸಾಧಿಸುವವರಿಗೆ ಗುರಿಯ ಕಡೆಗೆ ನೆಟ್ಟ ನೋಟ ಯಾವತ್ತೂ ಬದಲಾಗಬಾರದು, ಸಾಧನೆಯ ಓಟದಲ್ಲಿ ನೋವು ನಲಿವು ಸಹಜ ಸ್ಪರ್ಧೆ–ಪ್ರತಿಸ್ಪರ್ಧೆ ಇದ್ದುದ್ದೇ, ಒಮ್ಮೆ ಸಾಧಿಸಿದ ನಂತರದ ಆ ಆತ್ಮತೃಪ್ತಿಗೆ ಮಿತಿ ಇಲ್ಲ. ಆದರೆ ನಾನು ಹೇಳ ಹೊರಟಿರುವುದು ಹೀಗೆ ಸಾಧಿಸಿದ ನಂತರವೂ "ದೇರ್ ಈಜ್ ಆಲ್ವೇಶ್ ಸ್ಪೇಸ್ ಫಾರ್ ಇಮ್ಪ್ರೂವೈಜೇಷನ್" ಅದನ್ನು ಮಾತ್ರ ಎಂದಿಗೂ ಮರೆಯದಿರಿ.

"ನೆನಪಿರಲಿ ಹಾಗೆ ಸಾಧಿಸಿದ ಮತ್ತು ಅವರ ಸಾಧನೆಯ ಸ್ತರವನ್ನು ಮೈಮರೆಯದೇ ಕಾಪಿಟ್ಟುಕೊಂಡಿರುವವರೇ ಇಂದು ನಮಗೆಲ್ಲ ಆಕರ್ಷಕ ವ್ಯಕ್ತಿತ್ವದ ಹತ್ತಾರು ಮುಖಗಳಲ್ಲಿ ಒಬ್ಬೊಬ್ಬರಾಗಿ ಕಾಣುತ್ತಿದ್ದಾರೆ"

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕಾಣದ ಕಡಲು ಎಷ್ಟು ದೂರವಿದ್ದರೇನು?

ಕಾಣದ ಕಡಲು ಎಷ್ಟು ದೂರವಿದ್ದರೇನು?
ಬಾಳ ದೋಣಿಗೆ ನೀ ಹುಟ್ಟುಗೋಲಾಗಿರಲು.

ಸಮುದ್ರ ಮಧ್ಯೆ ಎಷ್ಟೇ ಅಲೆಗಳು ಇದ್ದರೇನು?
ದಡ ಸೇರಿಸುವ ಸಮರ್ಥ ನಾವಿಕ ನೀ
ಇರಲು.

ನಿನ್ನ ಪ್ರೀತಿಯ ಬಲೆಗೆ ಸೆರೆಸಿಕ್ಕ ಮೀನು ನಾ,
ನೀನಿದ್ದರೆ ಜೊತೆಯಲ್ಲಿ ಬಂಧನವು
ನಂದನವೇ.

ಸುಡುವ ಬಿಸಿಲು, ರಭಸದ ಗಾಳಿ, ಮಳೆಯ
ಹನಿ
ಅನುಗಾಲವು ಕಷ್ಟವೆನಿಸದು ಈ ಜೀವಕ್ಕೆ
ನಿನ್ನ ಹೃದಯದ ಚಿಪ್ಪಿನೊಳಗಿನ
ಮಣಿಯಾಗಿರಲು.

ಕಾಣದ ಕಡಲು ಎಷ್ಟು ದೂರವಿದ್ದರೇನು?

– ಮಂಜುಶ್ರೀ ಮುರಳೀಧರ್.

### ನಗಲೇಕೆ ಜಿಪುಣತನ

ಪರಿಚಿತರು ಕಂಡಾಗ ಮುಖವರಳಿಸಿ,
ತುಸು ನಗಲೇಕೆ ಜಿಪುಣತನ,
ಮುಗುಳು ನಕ್ಕಷ್ಟು ಹೆಚ್ಚಾಗುವುದು,
ಸಹಜ ಆರೋಗ್ಯದ ಧನ.

ಮಾತಾಡಿದರೆ ಎಲ್ಲಿ ತಮಗೆ
ನಷ್ಟವಾಗುವುದೋ ಎಂಬಂತೆ,
ಅಪರಿಚಿತರಂತೆ ನಡೆದು ಹೋದರೆ,
ನಮ್ಮ ಕಷ್ಟ ಸುಖಕ್ಕೂ ಯಾರಿಲ್ಲದಂತೆ.

ಹಣವಿದ್ದರೂ ತಿಂದುಣ್ಣದಂತೆ,
ಖರ್ಚು ಮಾಡದೆ ಕೂಡಿಟ್ಟು ಬದುಕಿದರೆ,
ಆ ಹಣಕಾದರೂ ಏನು ಮೌಲ್ಯ,
ಅದು ಕೂಡಾ ಆಗುವುದು ಕಸದಂತೆ.

– ಮಮತಾ ಶೃಂಗೇರಿ

ಸಹಕಾರ ಸಂಘಗಳ ಜಾಗೃತಿ ಸಮಾವೇಶದಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅಭಿಮತ

# ಪ್ರಾಥಮಿಕ ಪಠ್ಯದಲ್ಲೇ ಸಹಕಾರ ತತ್ವ ಬರಲಿ

■ ಹಂಪಿ ಟೈಮ್ಸ್ ಕೊಪ್ಪಳ

ಸಹಕಾರಿ ಕ್ಷೇತ್ರದಲ್ಲಿ ಯುವ ಸಮುದಾಯದ ಮುಂದೆ ಬರುತ್ತಿಲ್ಲ. ಪ್ರಾಥಮಿಕ ಹಂತದ ಶಿಕ್ಷಣ ವ್ಯವಸ್ಥೆಯಲ್ಲಿಯೇ ಸಹಕಾರಿ ಆಂದೋಲನಗಳ ಮಾಹಿತಿ ತಿಳಿಸುವಂತಾಗಬೇಕು ಎಂದು ಕರ್ನಾಟಕ ಸರ್ಕಾರದ ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಹೇಳಿದರು.



ಅವರು ಶನಿವಾರ ಕುಕನೂರಿನ ಎ.ಪಿ.ಎಂ.ಸಿ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಬೆಂಗಳೂರು, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಸಹಕಾರಿ ಯೂನಿಯನ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಸಹಕಾರ ಇಲಾಖೆ ಹಾಗೂ ಕುಕನೂರು ಮತ್ತು ಯಲಬುರ್ಗಾ ತಾಲ್ಲೂಕಿನ ವಿವಿಧ ಸಹಕಾರಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ, ಸಹಕಾರ ಜಾಗೃತಿ ಸಮಾವೇಶದಲ್ಲಿ ಸಹಕಾರಿ ಪಿತಾಮಹ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ್ ರವರ ಭಾವಚಿತ್ರಕ್ಕೆ ಪುಷ್ಪಾಚರಣೆ ಮಾಡಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಪಂಚದಲ್ಲಿ ಪ್ರಪ್ರಥಮವಾಗಿ ಪತ್ತಿನ ವ್ಯವಸ್ಥೆಯನ್ನು ಪ್ರಾರಂಭಿಸಿದ ಹೆಗ್ಗಳಿಕೆ ಸಹಕಾರಿ ಪಿತಾಮಹ ಸಿದ್ದನಗೌಡ ಪಾಟೀಲರದ್ದು. ಈ ಪತ್ತಿನ ಸಂಸ್ಥೆ 1904 ರಲ್ಲಿ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಆರಂಭವಾಯಿತು. ಯುವಕರು, ಮಹಿಳೆಯರು ಸಹಕಾರಿಗಳಾಗಲು ಮುಂದೆ ಬರಬೇಕು. ಸಹಕಾರಿ ಆಂದೋಲನ ಯಾವ ರೀತಿ ನಡೆಯುತ್ತದೆ, ಅದನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಹಾಗೂ ಅದರಿಂದ ರೈತರಿಗೆ ಏನೆಲ್ಲಾ ಅನುಕೂಲವಾಗುತ್ತದೆ. ಎಂಬುವುದನ್ನಾದರು ಪಠ್ಯ ಪುಸ್ತಕಗಳಲ್ಲಿ ಒಂದು ಪಾಠದಲ್ಲಿ ಅಳವಡಿಸಿ ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕು. ಸಹಕಾರಿ ಸಂಸ್ಥೆಗಳು ಪ್ರತಿ ಗ್ರಾಮಕ್ಕೊಂದು ಇರಬೇಕು ಎಂದರು.


ರಾಜ್ಯದಲ್ಲಿ ಸುಮಾರು 46 ರಿಂದ 47 ಸಾವಿರ ಸಹಕಾರಿ ಸಂಸ್ಥೆಗಳಿವೆ. ಇದರಲ್ಲಿ 26 ಸಾವಿರ ಸಹಕಾರಿ ಸಂಸ್ಥಗಳು ಮಾತ್ರ ಲಾಭದಲ್ಲಿವೆ. ಸಾಮಾನ್ಯವಾಗಿ ವಾಣಿಜ್ಯ ಬ್ಯಾಂಕುಗಳಲ್ಲಿ ಹೂಡಿಕೆ, ಸಹಕಾರಿ ಸಂಸ್ಥೆಗಳಲ್ಲಿ ಸಾಲ ಪಡೆಯಲಾಗುತ್ತದೆ. ನಮ್ಮ ಹೂಡಿಕೆಯೂ ಸಹಕಾರಿ ಸಂಸ್ಥೆಗಳಲ್ಲಿ ಮಾಡಿದಾಗ ಮಾತ್ರ, ಸಹಕಾರಿ ಕ್ಷೇತ್ರ ಬೆಳೆಯುತ್ತದೆ. ರೈತರಿಗೆ ಸಹಕಾರಿ ಸಂಸ್ಥೆಗಳಲ್ಲಿಯೇ ಎಲ್ಲಾ ಸೌಲಭ್ಯಗಳು ಸಿಗುವಂತಾಗಬೇಕು. ರೈತರು ಉತ್ಪಾದಿಸುವ ವಸ್ತುಗಳಿಗೆ ರೈತರೇ ಬೆಲೆ ನಿಗದಿಪಡಿಸುವಂತಾಗಬೇಕು. ರೈತರು ಕೃಷಿ ಜೊತೆಗೆ ಕುಲ ಕಸುಬುಗಳಿಗೂ ಆದ್ಯತೆ ನೀಡಬೇಕು. ಸಹಕಾರಿಗಳನ್ನು ಒಗ್ಗೂಡಿಸುವ ಜೊತೆಗೆ ಎಲ್ಲರ ಜವಾಬ್ದಾರಿಯನ್ನು ನೆನಪಿಸುವಂತಹ ಸಮಾವೇಶ ಇದಾಗಿದೆ. ಸಹಕಾರ ಸಂಘಗಳ ಅಧ್ಯಕ್ಷರು ಆಯಾ ಗ್ರಾಮ ಪಂಚಾಯತ್ ಸದನಗಳಲ್ಲಿ ಭಾಗವಹಿಸುವುದು ಮತ್ತು ಗ್ರಾ.ಪಂ ಸದಸ್ಯರಾಗಿ ಬರುವ ರೀಯಿಲ್ಲಿ ತಿದ್ದುಪಡಿಯನ್ನು ತರಲು ಪ್ರಯತ್ನವನ್ನು ಮಾಡುತ್ತವೆ. ಸಹಕಾರಿ ಸಂಸ್ಥೆಗಳು, ಜನ ಸಂಸ್ಥೆಗಳು ಹಾಗೂ ಸಹಕಾರಿ ಆಂದೋಲನಗಳು ಜನರ ಆಂದೋಲನಗಳಾಗಿದ್ದು, ಎಲ್ಲರ ಒಗ್ಗೂಡುವಿಕೆಯಿಂದ ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಆಶಯದಂತೆ ಸಹಕಾರಿ ಸಂಸ್ಥೆಗಳು ನಡೆಯುತ್ತಿವೆ ಎಂದು ಹೇಳಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿಗಳೂ ಸಹಕಾರಿ ಕ್ಷೇತ್ರದಲ್ಲಿ ಬರಬೇಕು. ಈ ದಿಶೆಯಲ್ಲಿ ಮೀಸಲಾತಿ ತರುವುದು ಮತ್ತು ನಾಮನಿರ್ದೇಶನಕ್ಕಾಗಿ ತಿದ್ದುಪಡಿಗಳನ್ನು ವಿಧಾನಮಂಡಳದಲ್ಲಿ ಮಂಜೂರು ಮಾಡಿ, ಗೌರವಾನ್ವಿತ ರಾಜ್ಯಪಾಲರಿಗೆ ಸಲ್ಲಿಸಿದ್ದೇವೆ. ಈ ಬಗ್ಗೆ ಅವರು ಕೆಲವು ವಿಚಾರಗಳ ಬಗ್ಗೆ ಹಿಚ್ಚಿನ ಮಾಹಿತಿಯನ್ನು ಕೇಳಿದ್ದು, ಅದನ್ನು ಸಹ ಸಲ್ಲಿಸಿದ್ದೇವೆ. ಒಂದು ವೇಳೆ >>4





ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಗಣಿತ ಪಾಸಾಗಲು ಸುಲಭ ಅಂಶಗಳು
ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ
ಇನ್ಸ್ಟಾಲ್ ಮಾಡಿಕೊಳ್ಳಿ!



### ತುಂಗಭದ್ರಾ ನೀರಿನ ಮಟ್ಟ

ಶನಿವಾರ : 08–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.70 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7229 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 47.711 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.06 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 177 ಕ್ಯುಸೆಕ್ |
| ಸಾಮರ್ಥ್ಯ | 9.484 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

09–02–2025 – ಭಾನುವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರಾ |
| ಯೋಗ | : ವಿಷ್ಕುಂಭ |
| ಕರಣ | : ಭವ |
| ಸೂರ್ಯೋದಯ | : 07:04:13 |
| ಸೂರ್ಯಾಸ್ತ | : 18:18:20 |
| ರಾಹು ಕಾಲ | : 16:54–18:18 |
| ಯಮಘಂಡ ಕಾಲ | : 12:41–14:06 |
| ಗುಳಿಕ ಕಾಲ | : 15:30–16:54 |

## ಕಠಿಣ ಅಭ್ಯಾಸ ಯಶಸ್ಸು ತರಲಿದೆ




■ ಹಂಪಿ ಟೈಮ್ಸ್ ಕೊಟ್ಟೂರು

ವಿದ್ಯಾರ್ಥಿಗಳು ನಿರ್ಧಿಷ್ಟ ಗುರಿಯೊಂದಿಗೆ ಪೂರಕ ಸಿದ್ದತೆ ಮತ್ತು ಕಠಿಣ ಅಭ್ಯಾಸದಲ್ಲಿ ತೊಡಗಿದಾಗ ಮಾತ್ರ ಗುರಿ ಸಾಧಿಸಲು ಸಾಧ್ಯ ಎಂದು ತಹಶಿಲ್ದಾರ ಅಮರೇಶ ಜಿ. ಕೆ ಹೇಳಿದರು.

ಕೊಟ್ಟೂರೇಶ್ವರ ಕಾಲೇಜಿನಲ್ಲಿ ಶನಿವಾರ ಎಂ.ಕಾಂ ನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸ್ವಾಗತ ಹಾಗೂ ಎಂಕಾಂ ಅಂತಿಮ ವರ್ಷದ ವಿದ್ಯಾರ್ಥಿನಿ ಕರೇಗೌಡ್ರು ದಿವ್ಯಾ ಅವರ ಚೊಚ್ಚಲ ಕೃತಿ ನಿಮ್ಮ ಜೀವನ ನಿಮ್ಮ ಆಯ್ಕೆ ನನ್ನ ಅನುಭವ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಗಳು ವಿದ್ಯಾಬ್ಯಾಸದ ಸಮಯದಲ್ಲಿಯೇ ಉತ್ತಮ ಹವ್ಯಾಸ, ಬರಹ ಹಾಗೂ ಸ್ಪರ್ಧಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂದು ತಮ್ಮ ಕಲಿಕಾ ದಿನಗಳ ಅನುಭವವನ್ನು ಹಂಚಿಕೊಂಡರು.

ಕೊಟ್ಟೂರೇಶ್ವರ ಮಹಾ ವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಸಿ. ಮೋಹನ ರಡ್ಡಿ ಮಾತನಾಡಿ, ಶಿಕ್ಷಕರು ಮಾರ್ಗದರ್ಶಕರು. ಉತ್ತಮ ಆಯ್ಕೆ ಮೂಲಕ ಪ್ರತಿಯೊಬ್ಬರು ಲೇಖಕಿ ದಿವ್ಯಾಳಂತೆ ಸಾಧನೆಯ ಮೆಟ್ಟಿಲುಗಳನ್ನೇರಬೇಕು ಎಂದುರು.

ಭಾಗೀರಥಿ ಕಾಲೇಜ್ ಪ್ರಾಚಾರ್ಯರಾದ ನಿರ್ಮಲ ಶಿವನಗುತ್ತಿ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿ, ವಿದ್ಯಾರ್ಥಿನಿ, ಚಿಕ್ಕವಯಸ್ಸಿನಲ್ಲಿ ಲೋಕಾನುಭವದ ಮೂಲಕ ತಮ್ಮನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದನ್ನು ಚನ್ನಾಗಿ ವರ್ಣಿಸಿದ್ದು. ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾರ್ಗದರ್ಶನವಾಗಬಲ್ಲದು ಎಂದರು.

ಕೊಟ್ಟೂರೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಎಂ. ರವಿಕುಮಾರ್ ಪ್ರಾಸ್ತಾವಿಕ ಮಾತನಾಡಿದರು. ಕಾಲೇಜ್ ಆಡಳಿತ ಮಂಡಳಿಯ ಸದಸ್ಯರಾದ ಗೂಳಿ ಮಲ್ಲಿಕಾರ್ಜುನ. ಟಿ.ಎಂ. ಗೀರೀಶ, ಉಪನ್ಯಾಸಕರಾದ ಗುರುಲಿಂಗನಗೌಡ. ಸುರೇಶ. ಶರಣೇಶ ಇದ್ದರು. ಕಾವೇರಿ, ನಂದಿನಿ, ಪವಿತ್ರ, ವಂದನೆ ಲಕ್ಷ್ಮೀ ನಿರ್ವಹಿಸಿದರು.

## ಗ್ರಾಮೀಣ ಮಹಿಳೆಯರಿಗೆ ಕೋಳಿ ಮರಿಗಳ ವಿತರಣೆಗೆ ಅರ್ಜಿ ಅಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2024–25 ನೇ ಸಾಲಿನಲ್ಲಿ 5 ವಾರದ ಕೋಳಿ ಮರಿಗಳನ್ನು ಉತ್ಪಾದಿಸಲು ಪ್ರೋತ್ಸಾಹಿಸಿ ಗ್ರಾಮೀಣ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದ ರೈತ ಮಹಿಳೆಯರಿಗೆ ತಲಾ 20 ರಂತೆ ವಿತರಿಸಲು ಫಲಾನುಭವಿಗಳ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕಾರ್ಯಕ್ರಮ ಅನುಷ್ಠಾನಗೊಳಿಸಲು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಹೊಸಪೇಟೆ ತಾಲೂಕಿಗೆ ಪರಿಶಿಷ್ಟ ಜಾತಿ 4, ಪರಿಶಿಷ್ಟ ಪಂಗಡ 80, ಸಾಮಾನ್ಯ ವರ್ಗದವರಿಗೆ 05. ಒಟ್ಟು 89 ಗುರಿಗಳನ್ನು ಹೊಂದಲಾಗಿದೆ. ಅರ್ಜಿಗಳನ್ನು ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಬರುವ ಪಶುಸಂಸ್ಥೆಯಲ್ಲಿ ಅರ್ಜಿಯನ್ನು ಸ್ವೀಕರಿಸಿ, ಫೆ.20 ರೊಳಗೆ ಅರ್ಜಿಗಳನ್ನು ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಹೊಸಪೇಟೆ ಇವರ ಕಚೇರಿಯಲ್ಲಿ ನೀಡಲು ಕೊಡಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 40 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ — ನಿನ್ನ ಏಳಿಗೆ ನೀನೆ ಶಿಲ್ಪಿ

### 10 ನೇ ತರಗತಿ ಸಮಾಜವಿಜ್ಞಾನ – ಇತಿಹಾಸ ವಿಭಾಗ 3/4 ಅಂಕದ ಬಹು ನಿರೀಕ್ಷಿತ ಪ್ರಶ್ನೆಗಳು

**1) ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಯುರೋಪಿಯನ್ನರಿಗೆ ಪ್ರೇರಿತವಾದ ಅಂಶಗಳಾವುವು?**

ಉತ್ತರ:– 1453 ರಲ್ಲಿ ಟರ್ಕರು ಕಾನ್‌ಸ್ಟಾಂಟಿನೋಪಲ್ ಪ್ರದೇಶವನ್ನು ವಶಪಡಿಸಿಕೊಂಡರು * ಟರ್ಕರು ಹೆಚ್ಚಿನ ತೆರಿಗೆಗಳನ್ನು ವಿಧಿಸಿದರು * ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ * ಇಟಲಿಯ ವರ್ತಕರ ಏಕಸ್ವಾಮ್ಯ ಮುರಿಯಲು ಸ್ಪೇನ್, ಪೋರ್ಚುಗಲ್ ದೇಶಗಳು ಪ್ರಯತ್ನಿಸಿದವು * ಯುರೋಪಿನ ರಾಜರು ನಾವಿಕರಿಗೆ ನೀಡಿದ ಪ್ರೋತ್ಸಾಹ * ದಿಕ್ಸೂಚಿ, ಅಸ್ಟ್ರೋಲೋಬ್, ಸಿಡಿಮದ್ದುಗಳು ಸಮುದ್ರಯಾನಕ್ಕೆ ಸಹಕಾರಿ ಯಾದವು

**2) ಬಕ್ಸಾರ್ ಕದನದ ಪರಿಣಾಮಗಳೇನು?**

ಉತ್ತರ:– * ಯುದ್ಧದಲ್ಲಿ ಮೈತ್ರಿ ಸೈನ್ಯವು ಬ್ರಿಟಿಷರ ವಿರುದ್ಧ ಸೋತಿತು * 2ನೇ ಷಾ ಆಲಂ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕನ್ನು ನೀಡಿದನು * ಷಾ ಆಲಂ ವಾರ್ಷಿಕ 26ಲಕ್ಷ ರೂಪಾಯಿಗಳಿಗೆ ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟು ಕೊಟ್ಟನು * ಷೂಜ–ಉದ್–ದೌಲನು ಯುದ್ಧನಷ್ಟ ಪರಿಹಾರವಾಗಿ 50ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡಿದನು * ಬ್ರಿಟಿಷರು ಮೀರ್ ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿದರು * ಬಂಗಾಳದ ಆಡಳಿತವನ್ನು ಕಂಪನಿ ವಹಿಸಿಕೊಂಡಿತು

**3) ಸಹಾಯಕ ಸೈನ್ಯ ಪದ್ದತಿಯ ನಿಬಂಧನೆಗಳಾವುವು?**

ಉತ್ತರ:– * ಈ ಪದ್ದತಿಯನ್ನು ವೆಲ್ಲೆಸ್ಲಿಯು ಜಾರಿಗೆ ತಂದನು * ದೇಶೀಯ ರಾಜನು ಬ್ರಿಟಿಷ್ ಸೈನಿಕ ತುಕ್ಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು * ಸೇನೆಯ ವೆಚ್ಚವನ್ನು ಆ ರಾಜ್ಯವೇ ಭರಿಸಬೇಕು * ರಾಜನು ತನ್ನ ಆಸ್ಥಾನದಲಿ ಬ್ರೀಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು * ಬ್ರಿಟಿಷರ ಅನುಮತಿಯಿಲ್ಲದೆ ಯಾವುದೇ ಯುರೋಪಿಯನ್ನರನ್ನು ನೇಮಿಸುವಂತಿಲ್ಲ. * ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್ ಸಮ್ಮತಿಬೇಕು * ಕಂಪನಿಯು ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆ ಒದಗಿಸುವುದು

**4) ಭಾರತದಲ್ಲಿ ಬ್ರಿಟಿಷ್ ಭೂಕಂದಾಯದ ಪದ್ದತಿಯಿಂದಾದ ಪರಿಣಾಮಗಳೇನು?**

ಉತ್ತರ:– * ರೈತರನ್ನು ಶೋಷಿಸುವ ಹೊಸ ಜಮೀನ್ದಾರಿ ವರ್ಗ ಹುಟ್ಟಿಕೊಂಡಿತು * ರೈತರು ವಿವಿಧ ಸಂಕಷ್ಟಗಳಿಗೆ ಒಳಗಾದರು. * ಭೂಮಿಯು ಮಾರಾಟದ ವಸ್ತುವಾಯಿತು * ಲೇವಾದೇವಿದಾರರು ಬಲಿಷ್ಠರಾದರು * ಇಂಗ್ಲೆಂಡಿನ ಕೈಗಾರಿಕೆಗೆ ಬೇಕಾದ ಬೆಳೆಯನ್ನೇ ಬೆಳೆಯಬೇಕಾಯಿತು. ಕೃಷಿ ಕೇತ್ರ ವಾಣಿಜ್ಯಕರಣಗೊಂಡಿತು.* ಅನೇಕ ಜಮೀನ್ದಾರರು ತಮ್ಮ ಭೂಮಿ ಅಡವಿಟ್ಟರು

**5) ಭಾರತದಲ್ಲಿ ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿ ಮಾಡಿ.**

ಉತ್ತರ:– * ಸ್ಥಳೀಯ ಭಾಷೆ, ಸಾಹಿತ್ಯಕ್ಕೆ ಪ್ರೋತ್ಸಾಹ ಸಿಕ್ಕಿತು. * ಭಾರತೀಯರು ಆಧುನಿಕ ಮನೋಭಾವ ಬೆಳೆಸಿಕೊಂಡರು. * ವೃತ್ತ ಪತ್ರಿಕೆಗಳು ಹುಟ್ಟಿಕೊಂಡವು. * ಅನೇಕ ಸುಧಾರಣಾ ಚಳಿವಳಿಗಳು ಹುಟ್ಟಿಕೊಂಡವು. * ಬ್ರಿಟಿಷ್ ಆಡಳಿತದ ವಿಮರ್ಶೆ ಆರಂಭವಾಯಿತು. * ಭಾರತೀಯರು ತಮ್ಮ ಪರಂಪರೆಯನ್ನು ಅರಿತರು

**6) ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳೇನು?**

ಉತ್ತರ:– ಟಿಪ್ಪು ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ಬಿಟ್ಟು ಕೊಡುವುದು * ಯುದ್ಧ ನಷ್ಟ ಪರಿಹಾರವಾಗಿ 3ಕೋಟಿ ರೂಪಾಯಿ ಕೊಡುವುದು. * ಕೊಡುವರೆಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ನೀಡುವುದು * ಪರಸ್ಪರ ಯುದ್ಧ ಖೈದಿಗಳನ್ನು ಬಿಡುಗಡೆಗೊಳಿಸುವುದು.

**7) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ರಾಜ್ಯ' ಎನಿಸಿಕೊಂಡಿತು. ಹೇಗೆ ?**

ಉತ್ತರ:– * ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೆರವು ನೀಡಿದರು. * ಪ್ರಾಥಮಿಕ ಶಾಲೆಗಳ ಶುಲ್ಕ ರದ್ದು ಮಾಡಿದರು. * ಶಿವನಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರ ಸ್ಥಾಪನೆ * ಮೈಸೂರು ವಿಶ್ವವಿದ್ಯಾನಿಲಯವನ್ನು ಆರಂಭಿಸಿದರು. * ಕಾವೇರಿ ನದಿಗೆ ಅಣೆಕಟ್ಟು ಕಟ್ಟಿಸಿದರು. * ಹೊಸ ರೈಲುಮಾರ್ಗಗಳನ್ನು ನಿರ್ಮಿಸಿದರು.*ಕೋಲಾರದಲ್ಲಿ ಚಿನ್ನದ ಗಣಿ ಮತ್ತು ಬೆಂಗಳೂರಿಗೆ ವಿದ್ಯುತ್ ಸರಬರಾಜು ಮಾಡಿದರು * ಭದ್ರಾವತಿಯಲ್ಲಿ ಕಬ್ಬಿಣ, ಸಿಮೆಂಟ್,ಕಾಗದ ಕಾರ್ಖಾನೆಗಳ ಸ್ಥಾಪನೆ.* ಮಂಡ್ಯದಲ್ಲಿ ಸಕ್ಕರೆ, ಮೈಸೂರನಲ್ಲಿ ಗಂಧದ ಎಣ್ಣೆ,ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆಗಳ ಸ್ಥಾಪಿಸಿ ಮೈಸೂರನ್ನು 'ಮಾದರಿ ರಾಜ್ಯ'ವನ್ನಾಗಿ ಮಾಡಿದರು.* ಗಾಂಧೀಜಿಯವರು ಇವರನ್ನು "ರಾಜಶ್ರೀ" ಎಂದು ಕರೆದಿದ್ದಾರೆ.

**8) ಬ್ರಹ್ಮ ಸಮಾಜ/ಆರ್ಯ ಸಮಾಜ/ಪ್ರಾರ್ಥನಾ ಸಮಾಜ/ ಸತ್ಯ ಶೋಧಕ ಸಮಾಜ/ರಾಮಕೃಷ್ಣ ಮಿಷನ್ ಉದ್ದೇಶಗಳು/ತತ್ವಗಳು/ ಬೋಧನೆಗಳು ಯಾವುವು?**

ಉತ್ತರ:– ಬಾಲ್ಯವಿವಾಹಕ್ಕೆ ವಿರೋಧ * ಸತಿಪದ್ದತಿಗೆ ವಿರೋಧ * ಬಹುದೇವತಾರಾಧನೆಗೆ ವಿರೋಧ * ಮೂಢನಂಬಿಕೆಗೆ ವಿರೋಧ * ಜಾತಿಪದ್ಧತಿಗೆ ವಿರೋಧ * ಬಹುಪತ್ನಿತ್ವ ಪದ್ದತಿಗೆ ವಿರೋಧ * ವಿಧವಾ ವಿವಾಹಕ್ಕೆ ಪ್ರೋತ್ಸಾಹ * ಏಕತಾದೇವತಾರಾಧನೆಗೆ ಪ್ರೋತ್ಸಾಹ * ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ * ಸ್ತ್ರೀಶಿಕ್ಷಣಕ್ಕೆ ಪ್ರೋತ್ಸಾಹ * ಇಂಗ್ಲೀಷ್ ಶಿಕ್ಷಣಕ್ಕೆ ಪ್ರೋತ್ಸಾಹ

#### ನೆನಪಿನಲ್ಲಿಡಿ

* ಯುರೋಪಿನ ವ್ಯಾಪಾರದ ಹೆಬ್ಬಾಗಿಲು – ಕಾನ್‌ಸ್ಟಾಂಟಿನೋಪಲ್
* ನೀಲಿ ನೀರಿನ ನೀತಿ – ಫ್ರಾನ್ಸಿಸ್ಕೊ–ಡಿ–ಆಲ್ಮೇಡ್
* ಸಹಾಯಕ ಸೈನ್ಯ ಪದ್ದತಿ_ಲಾರ್ಡ್ ವೆಲ್ಲೆಸ್ಲಿ
* ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ_ಡಾಲ್ ಹೌಸಿ
* ಖಾಯಂ ಜಮಿನ್ದಾರಿ ಪದ್ದತಿ –ಲಾರ್ಡ್ ಕಾರ್ನ್‌ವಾಲಿಸ್

#### ಪ್ರಮುಖ ಒಪ್ಪಂದಗಳು

1ನೇ ಆಂಗ್ಲೋಮರಾಠ ಯುದ್ದ–ಸಾಲ್ಬಾಯ್ ಒಪ್ಪಂದ
2ನೇ ಆಂಗ್ಲೋಮರಾಠ ಯುದ್ದ–ಬೆಸಿನ್ ಒಪ್ಪಂದ
1ನೇ ಆಂಗ್ಲೋ–ಮೈಸೂರು ಯುದ್ಧ–ಮದ್ರಾಸ್ ಒಪ್ಪಂದ
2ನೇ ಆಂಗ್ಲೋ–ಮೈಸೂರು ಯುದ್ಧ–ಮಂಗಳೂರು ಒಪ್ಪಂದ
3ನೇ ಆಂಗ್ಲೋ–ಮೈಸೂರು ಯುದ್ಧ–ಶ್ರೀರಂಗಪಟ್ಟಣ ಒಪ್ಪಂದ

(ಇತಿಹಾಸ ವಿಭಾಗ ಮುಂದುವರೆಯುವುದು..)

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

www.hampitimes.com - Hampi Times Margadarshi

ಸಾಯಿಮಣಿ ಪ್ರಕಾಶನ, ಹೊಸಪೇಟೆ

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

**ಮೈಕ್ರೋ ನ್ಯೂಸ್**

## ಸ್ಥಳೀಯ ಲೇಖಕರು, ಪ್ರಕಾಶಕರಿಂದ ಪುಸ್ತಕ ಖರೀದಿಸಲು ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಕಲ್ಯಾಣ ಕರ್ನಾಟಕ ಭಾಗದ ಲೇಖಕರಿಕಗೆ ಉತ್ತೇಜನ ನೀಡಲು ಹಾಗೂ ಈ ಭಾಗದ ಲೇಖಕರು ಬರೆದ ಪುಸ್ತಕಗಳನ್ನು ಪರಿಚಯಿಸುವ ಪ್ರಮುಖ ಉದ್ದೇಶದ ಹಿನ್ನೆಲೆಯಲ್ಲಿ ಪುಸ್ತಕಗಳು ಖರೀದಿಸಲು ಅರ್ಜಿ ಅಹ್ವಾನಿಸಲಾಗಿದೆ ಎಂದು ಉಪನಿರ್ದೇಶಕಿ ಬಿ.ಕೆ.ಲಕ್ಷ್ಮೀಕಿರಣ್ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಸಾರ್ವಜನಿಕರಿಗೆ ಓದುವ ಉತ್ತೇಜನ ನೀಡಲು ಕೆ.ಕೆ.ಆರ್.ಡಿ.ಬಿ ಕಲಬುರ್ಗಿ ಮ್ಯಾಕ್ರೋ ಯೋಜನೆಯಡಿ ಸ್ಥಳೀಯ ಲೇಖಕರಿಂದ 2018–19 ನೇ ಸಾಲಿನ ಜನವರಿ 2018 ರಿಂದ 2023–24 ನೇ ಸಾಲಿನ ಡಿಸೆಂಬರ್ 2023 ರವರೆಗೆ ಪ್ರಥಮವಾಗಿ ಮುದ್ರಣಗೊಂಡು ಸಾಹಿತ್ಯ, ಲಲಿತಕಲೆ, ವಿಜ್ಞಾನ, ಮಾನವೀಯ, ವೈದ್ಯಕೀಯ, ತಾಂತ್ರಿಕ, ಸ್ಪರ್ಧಾತ್ಮಕ, ಪರಾಮಾರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ, ನವಸಾಕ್ಷರರ ಕೃತಿಗಳು ಸೇರಿ ಇತರೆ ವಿಷಯಗಳ ಕನ್ನಡ ಲೇಖಕರು ಮತ್ತು ವಿತರಕರಿಂದ ಪುಸ್ತಕಗಳನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಫೆ.05 ರಿಂದ ಮಾ.05 ರವರೆಗೆ ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸುವವ ಲೇಖಕರು, ಪ್ರಕಾಶಕರು ಕಡ್ಡಾಯವಾಗಿ ಅಧಾರ ಕಾರ್ಡ್ ಮತ್ತು 371 ಜೆ ಪ್ರಮಾಣ ಪತ್ರದೊಂದಿಗೆ ತಮ್ಮ ದೃಡೀಕೃತ ವಾಸಸ್ಥಳ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು. ದಿನಾಂಕ: 05–03–2025 ರೊಳಗಾಗಿ ಮುಖ್ಯ ಗ್ರಂಥಾಲಯಾಧಿಕಾರಿ ಕಚೇರಿ, ನಗರ ಕೇಂದ್ರ ಗ್ರಂಥಾಲಯ, ಹೊಸಪೇಟೆ–583201 ಈ ವಿಳಾಸಕ್ಕೆ ಸಲ್ಲಿಸುವುದು. ದೂ.08394–221155, 08392–276887 ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

## ಮೈಕ್ರೋ ಫೈನಾನ್ಸ್ : ಫೆ.10 ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲ ವಸೂಲಾತಿ ನೆಪದಲ್ಲಿ ಸಾಲಗಾರರಿಗೆ ಆಗುತ್ತಿರುವ ಕಿರುಕುಳ ಹಿನ್ನೆಲೆಯ ಕುರಿತು ಚರ್ಚಿಸಲು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಫೆ.10 ರಂದು ಮಧ್ಯಾಹ್ನ 03 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ಏರ್ಪಡಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ತಿಳಿಸಿದ್ದಾರೆ.

## ಫಾರಂ 3 ವಿತರಣ ಮೇಳ

**ಮೊದಲ ಪುಟದಿಂದ**
ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಸಾರ್ವಜನಿಕರು ನಿಯಮಾನುಸಾರ ಶುಲ್ಕ ಪಾವತಿಸಿ ಖುದ್ದಾಗಿ ಫಾರಂ–3 ಗಳನ್ನು ಪಡೆಯಲು ಜಿಲ್ಲಾಡಳಿತದಿಂದ ಕ್ರಮವಹಿಸಲಾಗಿದೆ. ಈಗಾಗಲೇ ಹರಪನಹಳಿಯಲ್ಲಿ ಫಾರಂ–3 ಮೇಳವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿದ್ದು. ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ವಿಶೇಷವಾಗಿ ಫಾರಂ–3 ಮೇಳಗಳು ನಡೆಯಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೇಳದ ಸದುಪಯೋಗವನ್ನು ಸಾರ್ವಜನಿಕರು ಪಡೆಯುವಂತೆ ತಿಳಿಸಿದ್ದಾರೆ.

## ಪಾರ್ಕ್‌ಗಳ ಅಭಿವೃದ್ಧಿಗೆ ಭೂಮಿಪೂಜೆ

**ಮೊದಲ ಪುಟದಿಂದ**
ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ಹುಡಾ ಅಧ್ಯಕ್ಷ ಎಚ್.ಎನ್.ಎಫ್.ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಎನ್.ಎಂ. ಅಕ್ರಮ್ ಅಲಿ ಷಾ, ನಗರಸಭೆ ಆಯುಕ್ತ ಮನೋಹರ್, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ರವಿಕುಮಾರ್ ಸೇರಿದಂತೆ ವಿವಿಧ ವಾರ್ಡ್‌ಗಳ ನಗರಸಭೆ ಸದಸ್ಯರು, ಮುಖಂಡರು ಭಾಗವಹಿಸಿದ್ದರು.

# ದೆಹಲಿಯಲ್ಲಿ ಬಿಜೆಪಿ ಭರ್ಜರಿ ಗೆಲುವು
# ವಿಜಯನಗರದಲ್ಲಿ ಕಾರ್ಯಕರ್ತರ ಸಂಭ್ರಮಾಚರಣೆ

**ಹಂಪಿ ಟೈಮ್ಸ್ ಕೂಡ್ಲಿಗಿ**
ಪ್ರಧಾನಿ ಮೋದಿಯವರ ಭ್ರಷ್ಟಾಚಾರ ಮುಕ್ತ ಅಡಳಿತವೇ ದೆಹಲಿಯಲ್ಲಿ ಕಮಲ ಅರಳಲು ಸಾಧ್ಯ ಎಂದು ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಹೇಳಿದರು.

ಪಟ್ಟಣದ ಮದಕರಿ ವೃತ್ತದಲ್ಲಿ ಶನಿವಾರ ಬಿಜೆಪಿ ಮಂಡಲದ ವತಿಯಿಂದ ದೆಹಲಿಯಲ್ಲಿ ಅಧಿಕಾರ ಗದ್ದುಗೆ ಹಿಡಿದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಣೆಯಲ್ಲಿ ಮಾತನಾಡಿದರು. ಕಳೆದ ಹತ್ತು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಮೆಚ್ಚಿ ದೇಶದ ಜನ ಬಿಜೆಪಿ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ. ಇದರಿಂದ ದೇಶದ ಇಪ್ಪತ್ತಕ್ಕೂ ಹೆಚ್ಚು ರಾಜ್ಯಗಳಲ್ಲಿ ಭಾರತೀಯ ಜನತಾ ಪಾರ್ಟಿ ಅಧಿಕಾರ ನಡೆಸುತ್ತಿದ್ದೆ. ಕಳೆದ ಹತ್ತು ವರ್ಷಗಳ ಕೇಂದ್ರದ ಆಡಳಿತದಲ್ಲಿ ಒಂದು ಕಪ್ಪುಚುಕ್ಕೆ ಇಲ್ಲದಂತೆ ಅಧಿಕಾರ ನಡೆಸುತ್ತಿರುವುದನ್ನು ಮತದಾರರು ಗಮನಿಸಿ ಇಂಥಹ ಅಭೂತಪೂರ್ವ ಗೆಲುವನ್ನು ಪಕ್ಷಕ್ಕೆ ನೀಡುತ್ತಿದ್ದಾರೆ. ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರ್ಕಾರ ಬರೀ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದೆ. ಮುಡ ಹಗರಣ, ವಾಲ್ಮೀಕಿ ನಿಗಮದ ಹಗರಣದಲ್ಲಿ ಮುಖ್ಯಮಂತ್ರಿ ಸೇರಿದಂತೆ ಸಚಿವರ ಕೈವಾಡ ಇದ್ದರು, ಅಧಿಕಾರಕ್ಕಾಗಿ ಅಂಟಿ ಕುಳಿತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಂಬರುವ ಚುನಾವಣೆಯಲ್ಲಿ ರಾಜ್ಯದ ಜನತೆ ತಕ್ಕಪಾಠ ಕಲಿಸುತ್ತಾರೆ ಎಂದರು. ರಾಜ್ಯದಲ್ಲಿ



ಹೊಸಪೇಟೆಯಲ್ಲಿ ಶನಿವಾರ ಭಾರತೀಯ ಜನತಾ ಪಾರ್ಟಿ ಬಿಜೆಪಿ ಮಂಡಲದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ದೆಹಲಿ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಗಳಿಸಿದ್ದರಿಂದ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮೋತ್ಸವ ಆಚರಿಸಿದರು. ಹೊಸಪೇಟೆ ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಹಿರಿಯ ಮುಖಂಡರಾದ ಅಯ್ಯಾಳಿ ತಿಮ್ಮಪ್ಪ, ಆಶೋಕ ಜೀರೆ, ಸಾಲಿಸಿದ್ದಯ್ಯಸ್ವಾಮಿ, ರೇವಣಸಿದ್ದಪ್ಪ, ಕಿಚಿಡಿಕೊಟ್ರೇಶ್, ಕೆ.ಎಸ್.ರಾಘವೇಂದ್ರ ಸೇರಿದಂತೆ ವಿವಿಧ ಶಕ್ತಿಕೇಂದ್ರಗಳ ಪದಾಧಿಕಾರಿಗಳು ಇದ್ದರು.




ಗ್ಯಾರಂಟಿಗಳಿಗೆ ಹಣ ಹೊಂದಿಸಲು ಹೆಣಗಾಡುತ್ತಿದ್ದು, ಯಾವುದೇ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಇಲ್ಲದೆ ಬೊಕ್ಕಸ ಖಾಲಿಯಾಗಿದ್ದು. ಬಡ ಜನರ ಮೇಲೆ ಇನ್ನಿಲ್ಲದೆ ಆರ್ಥಿಕ ಹೊರೆ ಹಾಕುತ್ತಿರುವುದು ಅತ್ಯಂತ ಹೇಯಕರ ಎಂದು ತಿಳಿಸಿದರು. ಬಿಜೆಪಿ ಮಂಡಲದ ಅಧ್ಯಕ್ಷ ಕಾಮಶೆಟ್ಟಿ ನಾಗರಾಜ ಮಾತನಾಡಿ, 27 ವರ್ಷಗಳ ನಂತರ ಅಭೂತಪೂರ್ವ ಗೆಲುವು ದಾಖಲಿಸಿದ ಪಕ್ಷವು ಮುಸ್ಲಿಂ ಪ್ರಾಬಲ್ಯ ಇರುವ 7 ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿದೆ, ಅದರಂತೆ ಎಸ್ಸಿ ಪ್ರಾಬಲ್ಯದ 9 ಕ್ಷೇತ್ರದಲೂ ಬಿಜೆಪಿ ಗೆಲುವಿನ ನಗೆ ನಗೆ ಬೀರಿದೆ, ಆಪ್ ಪಕ್ಷವು 15 ಗ್ಯಾರಂಟಿ ಘೋಷಣೆ ಮಾಡಿದರೂ ಮತದಾರರು ಕೇಜ್ರೀವಾಲ ಅವರ ದುರಾಡಳಿತಕ್ಕೆ ತಕ್ಕಪಾಠ ಕಲಿಸಿ ಬಿಜೆಪಿ ಪಕ್ಷಕ್ಕೆ ಬಹುಮತ ನೀಡಿರುವುದು ಹೊಸ ಹುಮಸ್ಸು ತಂದಿದೆ ಎಂದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ರೇಖಾ ಮಲ್ಲಿಕಾರ್ಜುನ, ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಾಣೇಹಳ್ಳಿ ಹನುಮಂತಪ್ಪ, ಮಹಿಳಾ ಮೋರ್ಚಾ ಕಾರ್ಯದರ್ಶಿ ಗೀತಾ, ಮಂಡಲ ಪ್ರಧಾನ ಕಾರ್ಯದರ್ಶಿ ಪಿ.ಮಂಜುನಾಥ ನಾಯಕ, ಎಸ್ಟಿ ಮೋರ್ಚಾ ಮಂಡಲ ಅಧ್ಯಕ್ಷ ಗುರಿಕಾರ ರಾಘವೇಂದ್ರ, ಯುವ ಮೋರ್ಚಾ ಅಧ್ಯಕ್ಷ ಅಜೇಯ, ಪ್ರಧಾನ ಕಾರ್ಯದರ್ಶಿ ಭರತ್ ಜೂಗಲ್, ಮಾರುತಿ ನಾಯಕ, ಮಾಜಿ ಪಪಂ ಸದಸ್ಯ ಎಸ್.ದುರುಗೇಶ್, ಸೊಲ್ಲೇಶ್, ಉಗ್ರಂ ಕಿಟ್ಟಿ, ಹೆಗ್ಡಾಳ ಗೋಣೆಪ್ಪ ಸೇರಿದಂತೆ ಅನೇಕರು ಇದ್ದರು.

# ಪಠ್ಯದಲ್ಲೇ ಸಹಕಾರ ತತ್ವ ಬರಲಿ



**ಮೂರನೇ ಪುಟದಿಂದ**
ಇದಕ್ಕೆ ಅನುಮೋಧನೆಯ ದೊರೆಯದೇ ಇದ್ದಲ್ಲಿ, ಮತ್ತೊಮ್ಮೆ ವಿಧೆಯಕವನ್ನು ಮಂಡನೆ ಮಾಡಿ ಸಲ್ಲಿಸುತ್ತೇವೆ. ಇದಕ್ಕೆ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ. ಇತ್ತೀಚೆಗೆ ಖಾಸಗಿ ಮತ್ತು ಅನಧೀಕೃತ ಲೇವಾದೇವಿದಾರ ವಸೂಲಾತಿ ತಬ್ಬಾಳಿಕೆ ಹಿನ್ನೆಲೆಯಲ್ಲಿ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ನೋಡಿದ್ದೇವೆ. ಈ ಬಗ್ಗೆ ಸುಗೀವಾಜ್ಞೆ ಮಾಡಬೇಕೆಂದು ಈಗಾಗಲೇ ಸರ್ಕಾರವು ತೀರ್ಮಾನ ಮಾಡಿದೆ. ಇಂತಹ ಆತ್ಮಹತ್ಯೆ ಪ್ರಕರಣಗಳು ಕಂಡುಬಂದರೆ, ಈಗಿರುವ ಕಾನೂನಿನಲ್ಲಿಯೇ ಪ್ರಕರಣ ದಾಖಲಿಸಿ ತಪ್ಪಿತಸ್ಥರಿಗೆ ಶಿಕಲ್ಷೆ ನೀಡಲು ಅವಕಾಶವಿದ್ದು, ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಆರ್.ಡಿ.ಸಿ.ಸಿ ಬ್ಯಾಂಕಿನ ಕೇಂದ್ರ ಶಾಖೆಯನ್ನು ಕೊಪ್ಪಳ ಜಿಲ್ಲೆಗೆ ಬದಲಿಸುವ ಕುರಿತಂತೆ, ಈ ಬಗ್ಗೆ ಕಾರ್ಯಸಾಧ್ಯತಾ ಪಟ್ಟಿ ತಯಾರಿಸಿ, ಆರ್.ಬಿ.ಐ.ಗೆ ಸಲ್ಲಿಸಲು ಕ್ರಮ ವಹಿಸಲಾಗುವುದು ಎಂದರು.

ಸಹಕಾರಿ ಸಂಸ್ಥೆಗಳ ಸದಸ್ಯರು, ಕನಿಷ್ಠ ವ್ಯವಹಾರವನ್ನು ನಡೆಸಬೇಕು. ಕನಿಷ್ಠ ವ್ಯವಹಾರ ಮಾಡುವವರಿಗೆ ಮತದಾನ ಮಾಡುವ ಹಕ್ಕನ್ನು ನೀಡುವ ಕೆಲವನ್ನು ಮಾಡಿದ್ದೇವೆ. ಅಸಹಾಯಕನಿಗೆ ತ್ವರಿತವಾಗಿ ಸಹಾಯ ಮಾಡುವಂತಹ ಸಂಸ್ಥೆಗಳು ಸಹಕಾರಿ ಸಂಸ್ಥೆಗಳಾಗಿವೆ. ಸಂಸ್ಥೆಗಳಿಂದ ಪಡೆಯುವ ಸಾಲ ಮರು ಪಾವತಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಹಕಾರಿಗಳನ್ನು ಜಾಗೃತಿ ಮೂಡಿಸಲು ಕಮ್ಮಿಕೊಂಡಿರುವ ಇಂತಹ ಸಹಕಾರ ಜಾಗೃತಿ ಸಮಾವೇಶ ಹೆಚ್ಚು–ಹೆಚ್ಚಾಗಿ ನಡೆಯಬೇಕು. ಇಂದಹ ಸಮ್ಮೇಳನಗಳು ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ನಡೆಯಬೇಕು. ಕುಕನೂರಿನ ಸಹಕಾರಿ ಜಾಗೃತಿ ಸಮಾವೇಶದ ನಿರ್ಣಯಗಳನ್ನು ಜಾರಿ ಮಾಡುವಂತ ಕೆಲಸವನ್ನು ನಾವು ಮಾಡುತ್ತೇವೆ ಎಂದು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿ, ಸಹಕಾರ ಜಾಗೃತಿ ಸಮಾವೇಶ ಬಹಳ ವಿಶಿಷ್ಟವಾದದ್ದು, ಈ ಸಹಕಾರ ರಂಗ ಬೆಳಕು ಆಗಿದ್ದು, ಅದು ಬೆಳೆದಾಗ ಮಾತ್ರ ರೈತರು ನೆಮ್ಮದಿಯಿಂದ ಇರಲು ಸಾಧ್ಯ, ಪ್ರತಿಯೊಂದು ಗ್ರಾಮದಲ್ಲಿ ಸಹಕಾರ ಸಂಘ ಇರಬೇಕು. ಸರ್ಕಾರ ಬಹಳ ಸೌಲಭ್ಯ ಕೊಡುತ್ತಿದೆ. ಅವುಗಳನ್ನ ಉಪಯೋಗ ಮಾಡಬೇಕು ಅಂದ್ರೆ, ಸಹಕಾರ ಸಂಘ ಬೆಳೆಯಬೇಕು. ಸಹಕಾರ ರಂಗ ಬೆಳೆಯಲು ಎಲ್ಲರ ಸಹಕಾರ ಬಹಳ ಮುಖ್ಯವಾಗಿದೆ. ಇಲ್ಲಿನ ಜನರಿಗೆ ಮಾಹಿಯ ಕೊರತೆ ಹೆಚ್ಚಾಗಿದ್ದು, ವ್ಯವಹಾರ ಮಾಡಲು ತೊಂದರೆಯಾಗುತ್ತಿದೆ. ಅದಕ್ಕಾಗಿ ರಾಯಚೂರು–ಕೊಪ್ಪಳ ನಡುವೆ ಇರುವ ಒಂದೇ ಆರ್.ಡಿ.ಸಿ.ಸಿ.ಬ್ಯಾಂಕ್ ಇರುವುದರಿಂದ ಅದನ್ನ ವಿಭಜಿಸಿ ಕೊಪ್ಪಳಕ್ಕೆ ಪ್ರತ್ಯೇಕವಾಗಿ ಆರ್.ಡಿ.ಸಿ.ಸಿ. ಬ್ಯಾಂಕನ್ನು ಕೊಡಬೇಕು ಎಂದರು.


ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರವಾದ ಎಚ್.ಕೆ.ಪಾಟೀಲ ಅವರು ಸಹಕಾರ ವಾರಪತ್ರಿಕೆ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿ, ಕಣಗಿನಹಾಳ ಗ್ರಾಮದಲ್ಲಿ ಮೊದಲ ಸಹಕಾರಿ ಸೊಸೈಟಿ ಪ್ರಾರಂಭವಾಯಿತು. ಆ ನಂತರ ಹಲವಾರು ಸಹಕಾರಿಗಳು ಇದರ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಇಂದಿನ ಯುವಕರು ಸಹಕಾರ ಕ್ಷೇತ್ರಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಮಾತನಾಡಿ, ಇದು ಒಂದು ಐತಿಹಾಸಿಕ ಜಾಗೃತಿ ಸಮಾವೇಶ. ಇತರೆ ವಿಷಯಗಳ ಸಮಾವೇಶಗಳಾಗ್ತಾ ಇದ್ದವು. ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಈ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಮುಂಬೈ ಕರ್ನಾಟಕ ಭಾಗದಲ್ಲಿ ಅದಷ್ಟು ಸಹಕಾರಿ ಜಾಗೃತಿ ನಮ್ಮ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಅಷ್ಟು ಜಾಗೃತಿ ಆಗಿಲ್ಲ. ಈ ದಿಶೇಯಲ್ಲಿ ಕುಕನೂರಿನಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನಮ್ಮ ರಾಜ್ಯದಲ್ಲೆ ಮೊದಲು ಕಣಗಿನಹಾಳ ಗ್ರಾಮದಲ್ಲಿ ಪ್ರಾಥಮಿಕ ವ್ಯವಸಾಯ ಸಹಕಾರಿ ಸಂಘವನ್ನು ಸ್ಥಾಪಿಸಿ ಕ್ರಾಂತಿಯನ್ನ ಮಾಡಿದ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ ಅವರು, ಜನರಿಗೆ ಸಹಕಾರಿ ಸಂಘಗಳ ಬಗ್ಗೆ ಅರಿವನ್ನ ಮುಡಿಸುವ ಪ್ರಯತ್ನ ಮಾಡಿದ್ದಾರೆ ಎಂದರು.

**ಸನ್ಮಾನ:** ಸಕಾರ ಕ್ಷೇತ್ರದಲ್ಲಿ ಶ್ರಮಿಸಿದ ಮಾಜಿ ಸಚಿವರಾದ ಎಸ್.ಎಸ್.ಪಾಟೀಲ್, ಹಿರಿಯ ಸಹಕಾರಿಗಳಾದ ರಾಘವೇಂದ್ರಚಾರ್ಯ ಜೋಶಿ, ಶಿದ್ದನಗೌಡ ಹೊರಪೇಟೆ, ಶ್ರೀಪಾದಪ್ಪ ಅಧಿಕಾರಿ, ಯಂಕಣ್ಣ ಯರಾಶಿ, ಕೆರಿಬಸಪ್ಪ ನಿಡಗುಂದಿ, ಬಸವರಾಜ ಉಳ್ಳಾಗಡ್ಡಿ, ಬಿ.ಎಮ್.ಶಿರೂರ ಅವರಿಗೆ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ಸಂಸದರಾದ ಕೆ. ರಾಜಶೇಖರ ಹಿಟ್ನಾಳ, ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ಅಧ್ಯಕ್ಷರಾದ ಹಸನಸಾಬ ನಭಿಸಾಬ ದೋಟಿಹಾಳ, ಮಾಜಿ ಸಚಿವರು ಕರ್ನಾಟಕ ರಾಜ್ಯ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳದ ಅಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಮಾಜಿ ಸಚಿವರಾದ ಅಮರೇಗೌಡ ಪಾಟೀಲ್ ಬಯ್ಯಾಪುರ, ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ವಿಶ್ವನಾಥ ಪಾಟೀಲ ತೋರಣದಿನ್ನಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರಾದ ಶಿವಶಂಕರಗೌಡ ಪಾಟೀಲ್, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶೇಖರಗೌಡ ವಿ. ಮಾಲಿಪಾಟೀಲ, ರಾಯಚೂರು ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಸುರೇಶರಡ್ಡಿ ಮಾದಿನೂರು, ಕೊಪ್ಪಳ ಮತ್ತು ಬಳ್ಳಾರಿ ಕಾಸ್ಕಾರ್ಡ ಬ್ಯಾಂಕಿನ ನಿರ್ದೇಶಕರಾದ ವೃಷಬೇಂದ್ರಯ್ಯ ಜೆ.ಎಮ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ್ ಕುಮಾರ್, ಕೊಪ್ಪಳ ಸಹಕಾರ ಸಂಘಗಳ ಉಪನಿಬಂಧಕ ಸಜ್ಜನರ ಪ್ರಕಾಶ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಹಾಗೂ ಸಹಕಾರ ಇಲಾಖೆ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

## ಕರ್ನಾಟಕ ಗ್ಯಾರಂಟಿ ಪ್ರಗತಿಗೆ ಶ್ಲಾಘನೆ



**ಮೊದಲ ಪುಟದಿಂದ**
ಕಾರ್ಯಕ್ರಮಗಳ ವಿವರಗಳನ್ನು ಮುಖ್ಯ ಕಾರ್ಯದರ್ಶಿಗಳು ನೀಡಿದರು. ಮಹಿಳೆಯರು ಸ್ವಸಹಾಯ ಗುಂಪು ಗಳನ್ನು (SHG) ಸಂಘಟಿಸಲು, ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ, ವಿಷಕಾರಿ ಮುಕ್ತ ವಾತಾವರಣಕ್ಕಾಗಿ ಸಮಗ್ರ ಮತ್ತು ಸಾವಯವ ಕೃಷಿಗೆ ಪ್ರೋತ್ಸಾಹ ಕ್ರಮಗಳು ಸಮಗ್ರ ಹವಾಮಾನ ಬದಲಾವಣೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಹಾಯ ಮಾಡುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಉತ್ತೇಜಿಸಲು ಮಹಿಳಾ ಪರ ಕಾರ್ಯಕ್ರಮಗಳನ್ನು ಮುನ್ನಡೆ ಸುತ್ತಿರುವ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾಳಜಿಯನ್ನು ವಿಶ್ವ ಸಂಸ್ಥೆಯ ಅಧ್ಯಕ್ಷರು ಶ್ಲಾಘಿಸಿದರು. ಮುಂಬರುವ ವಿಶ್ವಸಂಸ್ಥೆಯ ಕಾರ್ಯಾಗಾರಗಳಲ್ಲಿ ಕರ್ನಾಟಕದ ಯಶೋ ಗಾಥೆಗಳನ್ನು ಹಂಚಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು, ಇದರಿಂದ ಇತರ ದೇಶಗಳು ಸಹ ಈ ಅತ್ಯುತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬಹುದು ಎಂದು ಅಭಿಪ್ರಾಯ ಪಟ್ಟರು.

**ನವೀಕರಿಸಬಹುದಾದ ಇಂಧನ ಉತ್ಪಾದನೆ ರಾಜ್ಯಕ್ಕೆ ಅಗ್ರಸ್ಥಾನ:**
ಒಟ್ಟು ಇಂಧನ ಉತ್ಪಾದನೆಯಲ್ಲಿ ಶೇ. 40 ರಷ್ಟು ಪಾಲು ನವೀಕರಿಸಬಹುದಾದ ಮೂಲಗಳಿಂದ ಬರುತ್ತಿರುವುದರಿಂದ ಕರ್ನಾಟಕವು ಶುದ್ಧ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ದೇಶದಲ್ಲಿಯೇ ಅಗ್ರಸ್ಥಾನ ಪಡೆದಿರುವುದಕ್ಕೆ ವಿಶ್ವಸಂಸ್ಥೆಯ ಅಧ್ಯಕ್ಷರು ಸಂತೋಷ ವ್ಯಕ್ತಪಡಿಸಿದರು.
ಮಾಹಿತಿ ತಂತ್ರಜ್ಞಾನ, ತಂತ್ರಾಂಶ ಅಭಿವೃದ್ಧಿ, ಕೃತಕ ಬುದ್ಧಿ ಮತ್ತೆ (AI), ಸಂಶೋಧನೆ ಮತ್ತು ನಾವೀನ್ಯತೆಗಾಗಿ ಜಾಗತಿಕ ಸಾಮರ್ಥ್ಯ ಕೇಂದ್ರಗಳ ಸ್ಥಾಪನೆಯಲ್ಲಿ ಕರ್ನಾಟಕವು ಸಾಧಿಸಿರುವ ಪ್ರಗತಿಯನ್ನು ವಿಶ್ವಸಂಸ್ಥೆಯ ಮೆಚ್ಚಿದರು. ಇತರ ದೇಶಗಳಿಗೆ ಡಿಜಿಟಲ್ ರೂಪಾಂತರವನ್ನು ಉತ್ತೇಜಿಸುವ ಸಲುವಾಗಿ ಸಹಾಯದ ಅಗತ್ಯವಿದ್ದು, ರಾಜ್ಯದ ಬೆಂಬಲವನ್ನು ಕೋರಿದರು.
ರಾಜ್ಯ, ಜಿಲ್ಲೆ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿ ಸೂಚಕಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಕರ್ನಾಟಕ ರಚಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳ (SDG) ಡ್ಯಾಶ್‌ಬೋರ್ಡ್ ವೀಕ್ಷಿಸಿ ಶ್ಲಾಘಿಸಿದರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಜಿ.ಸತ್ಯವತಿ ಮತ್ತಿತರರು ಇದ್ದರು.

## ನಾಳೆ ಜೆಸ್ಕಾಂ ಗ್ರಾಹಕರ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿ ಮತ್ತು ಹಗರಿಬೊಮ್ಮನ ಹಳ್ಳಿ ತಾಲ್ಲೂಕುಗಳ ಎಚ್.ಟಿ. ಮತ್ತು ಇ.ಎಚ್.ಟಿ ಗ್ರಾಹಕರ ಕುಂದುಕೊರತೆ ಸಭೆಯನ್ನು ಫೆ.11ರಂದು ಹೊಸಪೇಟೆಯ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಚೇರಿಯಲ್ಲಿ ಬೆಳಿಗ್ಗೆ 11ಕ್ಕೆ ಆಯೋಜಿಸಲಾಗಿದೆ ಎಂದು ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಳ್ಳಾರಿಯ ಜೆಸ್ಕಾಂ ಅಧೀಕ್ಷಕ ಅಭಿಯಂತರರು (ವಿದ್ಯುತ್) ಮತ್ತು ಉಪ–ಲೆಕ್ಕ ನಿಯಂತ್ರಣಾಧಿಕಾರಿ ಕಾರ್ಯ ಮತ್ತು ಪಾಲನೆ ವೃತ್ತ ಕಚೇರಿ ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಗ್ರಾಹಕರು ಸಭೆಯಲ್ಲಿ ಪಾಲ್ಗೊಂಡು ತಮ್ಮ ಕುಂದುಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.